**0**.

# ವ್ಯವಸ್ಥಾಪಕ ನಿರ್ದೇಶಕರವರ ಕಾರ್ಯಾಲಯ

## ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಶಿವಮೊಗ್ಗ

**ಮಾಚೇನಹಳ್ಳಿ., ನಿದಿಗೆ ಅಂಚೆ, ಶಿವಮೊಗ್ಗ 577 222**

ಫ್ಯಾಕ್ಸ್ ನಂ 08182 – 246284 ದೂರವಾಣಿ : 246161, 246162, 246163

**ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ಪ್ಯಾಕ್ ಮಾಡುವ FFS (Form fill & seal) ಮಾದರಿ ಯಂತ್ರಗಳ ಚಾಲನೆ, ದುರಸ್ಥಿ ಮತ್ತು ನಿರ್ವಹಣೆ ಗುತ್ತಿಗೆದಾರಿಕೆ ಮತ್ತು ವೈಂಡಿಂಗ್ ಅಂಡ್ ರೀವೈಂಡಿಗ್ ಹಾಗೂ ಇಂಜೆಕ್ಟ್ ಪ್ರಿಂಟರ್‌ಗಳ ಚಾಲನೆ, ದುರಸ್ಥಿ ನಿರ್ವಹಣೆ ಗುತ್ತಿಗೆದಾರಿಕೆ0ಯ**

# ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ಪುಸ್ತಕ

## IFT NO:ಸಂಖ್ಯೆ:ಶಿದಾಚಿಹಾಒ:ಪ್ಲಾಂಟ್:ಪ್ರೀ ಪ್ಯಾಕ್:7352:2015–16 ದಿನಾಂಕ:–16.01.2016

### ಟೆಂಡರ್ ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಮಾತ್ರ)

ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯಾಪ್ತಿಯಲ್ಲಿನ ಶಿವಮೊಗ್ಗ ಡೈರಿಯಲ್ಲಿ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ಪ್ಯಾಕ್ ಮಾಡುವ ಈಈಖ **(Form fill & seal)** ಮಾದರಿ ಯಂತ್ರ್ರಗಳ ಚಾಲನೆ, ದುರಸ್ಥಿ ಮತ್ತು ನಿರ್ವಹಣೆ ಗುತ್ತಿಗೆದಾರಿಕೆ ಮತ್ತು ವೈಂಡಿಂಗ್ ಅಂಡ್ ರೀವೈಂಡಿಗ್ ಹಾಗೂ ಇಂಜೆಕ್ಟ್ ಪ್ರಿಂಟರ್‌ಗಳ ಚಾಲನೆ, ದುರಸ್ಥಿ ನಿರ್ವಹಣೆ ಗುತ್ತಿಗೆದಾರಿಕೆಯ ಕೆಲಸಗಳು(ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಮಾತ್ರ)

ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯಾಪ್ತಿಯಲ್ಲಿನ ಶಿವಮೊಗ್ಗ ಡೈರಿಯಲ್ಲಿ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ಪ್ಯಾಕ್ ಮಾಡುವ ಈಈಖ **(Form fill & seal)** ಮಾದರಿ ಯಂತ್ರ್ರಗಳ ಚಾಲನೆ, ದುರಸ್ಥಿ ಮತ್ತು ನಿರ್ವಹಣೆ ಗುತ್ತಿಗೆದಾರಿಕೆ ಮತ್ತು ವೈಂಡಿಂಗ್ ಅಂಡ್ ರೀವೈಂಡಿಗ್ ಹಾಗೂ ಇಂಜೆಕ್ಟ್ ಪ್ರಿಂಟರ್‌ಗಳ ಚಾಲನೆ, ದುರಸ್ಥಿ ನಿರ್ವಹಣೆ ಗುತ್ತಿಗೆದಾರಿಕೆಯ ಕೆಲಸಗಳಿಗೆ ಹಾಗೂ ಕೋಡಿಂಗ್ ಯಂತ್ರಗಳ ಚಾಲನೆ, ದುರಸ್ಥಿ ಮತ್ತು ನಿರ್ವಹಣೆ ಕೆಲಸದಲ್ಲಿ ಅರ್ಹ ಅನುಭವವುಳ್ಳ (ಪ್ರಾದೇಶಿಕ ಭವಿಷ್ಯನಿಧಿ ಕಛೇರಿ ಮತ್ತು ನೌಕರರ ರಾಜ್ಯ ವಿಮಾ ಇಲಾಖೆಯ ನೊಂದಣಿ ಹಾಗೂ ಕಾರ್ಮಿಕ ಇಲಾಖೆಯಿಂದ ಪರವಾನಗಿ ಹೊಂದಿರುವ)ಅಧಿಕೃತ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕೋಷ್ಟಕದಂತೆ (ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಮಾತ್ರ) ಟೆಂಡರ್ ಆಹ್ವಾನಿಸಿದ್ದು ಆಸಕ್ತ ಗುತ್ತಿಗೆದಾರರು ಟೆಂಡರ್ ದಾಖಲಾತಿಯನ್ನು ದಿನಾಂಕ:15.02.2016 ರ ಸಂಜೆ 4.00 ಘಂಟೆಯವರೆಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ನಿಗದಿತ ಶುಲ್ಕಪಾವತಿಯೊಂದಿಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಬಿಡ್‌ಗಳನ್ನು ಇ.ಎಂ.ಡಿ ಮೊತ್ತದೊಂದಿಗೆ ದಿನಾಂಕ 16–02–2016 ರ ಸಂಜೆ 04–30 ಗಂಟೆಗಳ ಒಳಗಾಗಿ ಇ–ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ತಾಂತ್ರಿಕ ಟೆಂಡರ್‌ಗಳನ್ನು ದಿನಾಂಕ 18–02–2016 ರ ಬೆಳಿಗ್ಗೆ 11.30 ತರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

| ಕೆಲಸದ ವಿವರ | ವಾರ್ಷಿಕ ಅಂದಾಜು ಟೆಂಡರ್ ಮೌಲ್ಯ | ನಿಗದಿತ ಇ.ಎಂ.ಡಿ. |
|---|---|---|
| ಶಿವಮೊಗ್ಗ ಡೈರಿ ಹಾಗೂ ದಾವಣಗೆರೆ ಡೈರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 15 ಡಬಲ್ ಹೆಡ್ ಹಾಲು ಮೊಸರು, ಮಜ್ಜಿಗೆ, ಲಸ್ಸಿ, ತುಪ್ಪ ಪ್ಯಾಕಿಂಗ್ ಯಂತ್ರಗಳನ್ನು ಮತ್ತು 3 ಸಂಖ್ಯೆ ಕೋಡಿಂಗ್ (ವೈಂಡಿಂಗ್ ಅಂಡ್ ರಿವೈಂಡಿಂಗ್ ಹಾಗೂ ಇಂಜೆಕ್ಟ್ ಪ್ರಿಂಟರ್) ಯಂತ್ರಗಳನ್ನು ವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಚಾಲನೆ, ದುರಸ್ಥಿ ಮತ್ತು ನಿರ್ವಹಣೆಯ ಗುತ್ತಿಗೆದಾರಿಕೆ. (ದಿನವೊಂದಕ್ಕೆ ಅಂದಾಜು 2.0 ಲಕ್ಷ ಲೀಟರ್) | ರೂ.36 ಲಕ್ಷಗಳು | ರೂ.90,000/– |

ಈ ಟೆಂಡರ್‌ಗೆ ಸಂಬಂಧಿಸಿದಂತೆ, ಇನ್ನೂ ಹೆಚ್ಚಿನ ಮಾಹಿತಿಗಳು ಮತ್ತು ವಿವರಗಳು ಅಗತ್ಯವಿದ್ದಲ್ಲಿ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ಪಡೆಯಬಹುದಾಗಿರುತ್ತದೆ. ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತಾರೆ. ಕಚೇರಿ ದೂರವಾಣಿ ಸಂಖ್ಯೆ : 08182–246161, 246163

ಸಹಿ/–
ವ್ಯವಸ್ಥಾಪಕನಿರ್ದೇಶಕರು.
ಶಿವಮೊಗ್ಗ,ದಾವಣಗೆರೆ ಚಿತ್ರದುರ್ಗಜಿಲ್ಲಾ
ಸಹಕಾರ ಹಾಲು ಒಕ್ಕೂಟ. ಶಿವಮೊಗ್ಗ.

# ಟೆಂಡರ್ ಪ್ರಕಟಣೆ : –

**(ಇ–ಪ್ರಕ್ಯೂರ್‌ಮೆಂಟ್ ಮುಖೇನಾ – https:eproc.karnataka.gov.in)**

ವಿಷಯ:ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ಪ್ಯಾಕ್ ಮಾಡುವ FFS (Form fill & seal) ಮಾದರಿ ಯಂತ್ರಗಳ ಚಾಲನೆ ದುರಸ್ಥಿ ಮತ್ತು ನಿರ್ವಹಣೆ ಗುತ್ತಿಗೆದಾರಿಕೆ ಮತ್ತು ವೈಂಡಿಂಗ್ ಅಂಡ್ ರಿವೈಂಡಿಂಗ್ ಯಂತ್ರ ಹಾಗೂ ಇಂಜೆಕ್ಟ್ ಪ್ರಿಂಟರಗಳ ಚಾಲನೆ ದುರಸ್ಥಿ ನಿರ್ವಹಣೆ ಗುತ್ತಿಗೆದಾರಿಕೆಯ ಬಗ್ಗೆ.

1. ಶಿವಮೊಗ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಇವರು ಕೆಳಗೆ ನಮೂದಿಸಿರುವ ಕಾರ್ಯನಿರ್ವಹಣೆಗೆ ಎರಡು ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಹಾಗೂ ವಾಣಿಜ್ಯ ಟೆಂಡರ್) ಅರ್ಹ ಟೆಂಡರ್‌ದಾರರಿಂದ ಒಂದು ವರ್ಷದ ಅವಧಿಗೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ಪ್ಯಾಕ್ ಮಾಡುವ FFS (Form fill & seal) ಮಾದರಿ ಯಂತ್ರಗಳು ಹಾಗೂ ಕೋಡಿಂಗ್ (ವೈಂಡಿಂಗ್ ಅಂಡ್ ರಿವೈಂಡಿಂಗ್ ಹಾಗೂ ಇಂಜೆಕ್ಟ್ ಪ್ರಿಂಟರ್) ಯಂತ್ರಗಳ ಚಾಲನೆ, ದುರಸ್ಥಿ ಮತ್ತು ನಿರ್ವಹಣೆ ಕೆಲಸದಲ್ಲಿ ಅರ್ಹ ಅನುಭವವುಳ್ಳ ಟೆಂಡರುದಾರರಿಂದ (ಪ್ರಾದೇಶಿಕ ಭವಿಷ್ಯನಿಧಿ ಕಛೇರಿ ಮತ್ತು ನೌಕರರ ರಾಜ್ಯ ವಿಮಾ ಇಲಾಖೆಯ ನೊಂದಣಿ ಹಾಗೂ ಕಾರ್ಮಿಕ ಇಲಾಖೆಯಿಂದ ಪರವಾನಗಿ ಹೊಂದಿರುವ) ಇ–ಪ್ರಕ್ಯೂರ್‌ಮೆಂಟ್ ಮುಖೇನಾ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| ಕೆಲಸದ ವಿವರ | ವಾರ್ಷಿಕ ಅಂದಾಜು ಟೆಂಡರ್ ಮೌಲ್ಯ | ನಿಗದಿತ ಇ.ಎಂ.ಡಿ. |
|---|---|---|
| ಶಿವಮೊಗ್ಗ ಡೈರಿ ಹಾಗೂ ದಾವಣಗೆರೆ ಡೈರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 15 ಡಬಲ್ ಹೆಡ್ ಹಾಲು ಮೊಸರು, ಮಜ್ಜಿಗೆ, ಲಸ್ಸಿ, ತುಪ್ಪ ಪ್ಯಾಕಿಂಗ್ ಯಂತ್ರಗಳನ್ನು ಮತ್ತು 3 ಸಂಖ್ಯೆ ಕೋಡಿಂಗ್ (ವೈಂಡಿಂಗ್ ಅಂಡ್ ರಿವೈಂಡಿಂಗ್ ಹಾಗೂ ಇಂಜೆಕ್ಟ್ ಪ್ರಿಂಟರ್) ಯಂತ್ರಗಳನ್ನು ವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಚಾಲನೆ, ದುರಸ್ಥಿ ಮತ್ತು ನಿರ್ವಹಣೆಯ ಗುತ್ತಿಗೆದಾರಿಕೆ. ದಿನವೊಂದಕ್ಕೆ ಅಂದಾಜು 2.0 ಲಕ್ಷ ಲೀಟರ್ | ರೂ.36 ಲಕ್ಷಗಳು | ರೂ.90,000/– |

1. ಟೆಂಡರ್ ದಾಖಲಾತಿಗಳ ಇ–ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿ ಕೊಳ್ಳುವ ದಿನಾಂಕ:15–2–2016
2. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:16–2–2016 ಸಂಜೆ 4.30 ಘಂಟೆಯ ವರಗೆ
3. ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ:18–2–2016 ಬೆಳಿಗ್ಗೆ 11.30 ಘಂಟೆಗೆ ತೆರೆಯಲಾಗುವುದು.
4. ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಈ ಟೆಂಡರ್‌ಗೆ ಸಂಬಂಧಿಸಿದಂತೆ, ಇನ್ನೂ ಹೆಚ್ಚಿನ ಮಾಹಿತಿಗಳು ಮತ್ತು ವಿವರಗಳು ಅಗತ್ಯವಿದ್ದಲ್ಲಿ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ಪಡೆಯಬಹುದಾಗಿರುತ್ತದೆ. ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತಾರೆ. ಕಚೇರಿ ದೂರವಾಣಿ ಸಂಖ್ಯೆ : 08182–246161, 246163

ಸಹಿ/–
ವ್ಯವಸ್ಥಾಪಕ ನಿರ್ದೇಶಕರು,
ಶಿವಮೊಗ್ಗ ಹಾಲು ಒಕ್ಕೂಟ.ನಿ

# ಅನುಬಂಧ ಸಿ

## ತಾಂತ್ರಿಕ ಮತ್ತು ವಾಣಿಜ್ಯ ಟೆಂಡರಿನ ಷರತ್ತು ಮತ್ತು ನಿಬಂಧನೆಗಳು

1.0 ತಾಂತ್ರಿಕ ಮತ್ತು ವಾಣಿಜ್ಯ ಟೆಂಡರನ್ನು ಆಹ್ವಾನಿಸಿರುವುದು.

1.1 ಶಿವಮೊಗ್ಗ ಹಾಲು ಒಕ್ಕೂಟವು ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ತುಂಬಿಸುವ ಯಂತ್ರಗಳ ದುರಸ್ಥಿ ಮತ್ತು ನಿರ್ವಹಣೆಯ ಗುತ್ತಿಗೆದಾರಿಕೆ ಬಗ್ಗೆ ಅರ್ಹ ಕಾರ್ಮಿಕ ಗುತ್ತಿಗೆದಾರರಿಂದ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರುಗಳನ್ನು ಆಹ್ವಾನಿಸಿರುತ್ತದೆ.

1.2 ಅರ್ಹರಾದ ಮತ್ತು ಆಸಕ್ತ ವ್ಯಕ್ತಿ / ಸಂಸ್ಥೆಗಳು ಹೆಚ್ಚಿನ ಮಾಹಿತಿಯನ್ನು ಪ್ಯಾಕಿಂಗ್ ವಿಭಾಗದ ಮುಖ್ಯಸ್ಥರು, ಶಿವಮೊಗ್ಗ ಹಾಲು ಒಕ್ಕೂಟ ಇವರಿಂದ ಪಡೆಯಬಹುದು.

1.3 ಶಿವಮೊಗ್ಗ ಹಾಲು ಒಕ್ಕೂಟದ ವತಿಯಿಂದ ಪಡೆದ ನಿಗದಿತ ದಸ್ತಾವೇಜಿನಲ್ಲಿ ಮಾತ್ರ ಟೆಂಡರನ್ನು ಸಲ್ಲಿಸುವುದು. ಟೆಂಡರು ದಸ್ತಾವೇಜುಗಳನ್ನು ಬೇರೆಯವರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ.

1. ಕೆಲಸದ ವಿವರಣೆ, ಟೆಂಡರು ಪ್ರಕ್ರಿಯೆ, ಟೆಂಡರು ಷರತ್ತು, ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳು ಇವುಗಳ ವಿವರಗಳನ್ನು ದಸ್ತಾವೇಜು ಒಳಗೊಂಡಿರುತ್ತದೆ. ಟೆಂಡರು ಆಹ್ವಾನಿಸುವ ನೋಟೀಸಿನ ಜೊತೆಯಲ್ಲಿ ಟೆಂಡರು ದಸ್ತಾವೇಜು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತದೆ.

ಎ. ತಾಂತ್ರಿಕ ಟೆಂಡರು ಭಾಗ – 1:

- ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ಅರ್ಜಿ
- ಟೆಂಡರಿನ ಷರತ್ತು ಮತ್ತು ನಿಬಂಧನೆಗಳು
- ವಾರ್ಷಿಕ ಗುತ್ತಿಗೆ ಆಧಾರದಲ್ಲಿ ಕೆಲಸವನ್ನು ನಿರ್ವಹಿಸುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳು
- ಕೆಲಸದ ವಿವರಣೆ
- ಇ.ಎಂ.ಡಿ. ವಿವರ
- ತಾಂತ್ರಿಕ ಮತ್ತು ವಾಣಿಜ್ಯ ಟೆಂಡರಿನ ತಪಶೀಲು ಪಟ್ಟಿ (Check list)

ಬಿ. ವಾಣಿಜ್ಯ ಟೆಂಡರು ಭಾಗ – 2 :

ವಾಣಿಜ್ಯ ಟೆಂಡರು ದರ ಪ್ರಸ್ತಾಪ

ವಾಣಿಜ್ಯ ದರ ಅನುಸೂಚಿ (Price schedule)

3.1 ಟೆಂಡರು ದಸ್ತಾವೇಜಿನಲ್ಲಿ ಇರುವ ಎಲ್ಲಾ ಸೂಚನೆಗಳು, ನಮೂನೆಗಳು, ವಿಶಿಷ್ಟ ವಿವರಣೆ (Specification) ಷರತ್ತು ಮತ್ತು ನಿಬಂಧನೆಗಳು ಇವುಗಳನ್ನು ಟೆಂಡರುದಾರರು ಅಧ್ಯಯನ ಮಾಡಿ ಮನವರಿಕೆ ಮಾಡಿಕೊಂಡು ಶಿವಮೊಗ್ಗ ಹಾಲು ಒಕ್ಕೂಟದ ಪೂರ್ವಾನುಮತಿಯೊಂದಿಗೆ ಕೆಲಸದ ಸ್ಥಳಕ್ಕೆ ಭೇಟಿ ನೀಡಿ ನಿರ್ವಹಿಸಬೇಕಾದ ಕೆಲಸಗಳನ್ನು ಖುದ್ದಾಗಿ ನೋಡಿ ಅದಕ್ಕೆ ಬೇಕಾದ ಸಂಪೂರ್ಣ ಮಾಹಿತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ಅಧಿಕಾರಿಗಳಿಂದ ಪಡೆದು ಕೆಲಸದ ವ್ಯಾಪ್ತಿ, ಕೆಲಸಗಾರರಿಗೆ ನೀಡಬೇಕಾದ ಶಾಸನಬದ್ಧ ಸೌಲಭ್ಯಗಳ ಬಗ್ಗೆ ಮನವರಿಕೆ ಮಾಡಿಕೊಂಡು ನಂತರ ಟೆಂಡರು ಇ ಪ್ರೊಕ್ಯೂರ್‌ಮೆಂಟ್ ಮೂಲಕ ದರ ನಮೂದಿಸುವುದು. ಕೆಲಸದ ವಿವರಣೆಯಲ್ಲಿ ನಮೂದಿಸಿರುವ ಕೆಲಸದ ವ್ಯಾಪ್ತಿಯು ಕೇವಲ ಸೂಚ್ಯವಾಗಿದ್ದು (Indicative) ವ್ಯಾಪಕವಲ್ಲ (Exhaustive). ಟೆಂಡರು ದಸ್ತಾವೇಜಿನಲ್ಲಿರುವಂತೆ ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ಒದಗಿಸಲು ವಿಫಲವಾದಲ್ಲಿ ಅಥವಾ ಟೆಂಡರು ದಸ್ತಾವೇಜಿಗನುಗುಣವಾಗಿ ಎಲ್ಲಾ ವಿಧದಲ್ಲಿ ವಾಸ್ತವಿಕವಾಗಿ ಪ್ರತಿಕ್ರಿಯಿಸುವ (Substantially responsive) ರೀತಿಯಲ್ಲಿರುವ ಟೆಂಡರನ್ನು ಸಲ್ಲಿಸದಿದ್ದಲ್ಲಿ ಅದು ಟೆಂಡರುದಾರರು ನಮೂದಿಸಿದ : ಸಲ್ಲಿಸಿದ ಮಾಹಿತಿ ಸುಳ್ಳು ಎಂದು ಪರಿಶೀಲನೆಯ ಸಂದರ್ಭದಲ್ಲಿ ಕಂಡುಬಂದಲ್ಲಿ ಯಾವುದೇ ನೋಟಿಸ್ ನೀಡದೆ ಟೆಂಡರನ್ನು ತಿ'ರಸ್ಕರಿಸಲಾಗುವುದು : ಗುತ್ತಿಗೆಯನ್ನು ರದ್ದುಗೊಳಿಸಲಾಗುವುದು.

**4 ಟೆಂಡರು ದಸ್ತಾವೇಜುಗಳ ತಿದ್ದುಪಡಿ :**

4.1 ಟೆಂಡರು ದಸ್ತಾವೇಜುಗಳ ಸಲ್ಲಿಕೆಯ ನಂತರ ಅಥವಾ ಟೆಂಡರನ್ನು ತೆರೆಯುವ ಮೊದಲು ಯಾವುದೇ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಯಾವುದೇ ಕಾರಣಗಳಿಗೆ ಸ್ವತಃ ತಾನೇ ಮುಂದಾಗಿ ಅಥವಾ ಭಾವೀ ಟೆಂಡರುದಾರರು ಸ್ಪಷ್ಟೀಕರಣಕ್ಕಾಗಿ ಮಾಡಿದ ಮನವಿಗೆ ಪ್ರತಿಕ್ರಿಯೆಯಾಗಲೀ ಟೆಂಡರು ದಸ್ತಾವೇಜುಗಳಿಗೆ ಯಾವುದೇ ಬದಲಾವಣೆಗಳು, ಮಾರ್ಪಾಡುಗಳು ಅಥವಾ ತಿದ್ದುಪಡಿಗಳು ಇವುಗಳನ್ನು ಮಾಡುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

4.2 ಟೆಂಡರು ದಸ್ತಾವೇಜುಗಳಲ್ಲಿ ಬದಲಾವಣೆ / ತಿದ್ದುಪಡಿಗಳು ಇದ್ದಲ್ಲಿ ಟೆಂಡರು ದಸ್ತಾವೇಜುಗಳನ್ನು ಖರೀದಿಸಿದ ಎಲ್ಲರಿಗೂ ಪತ್ರ : ಫ್ಯಾಕ್ಸ್ ಸಂದೇಶದ ಮೂಲಕ ಅಂಥ ಬದಲಾವಣೆಯ ತಿಳುವಳಿಕೆ ಕಳುಹಿಸಲಾಗುವುದು.

4.3 ಭಾವೀ ಟೆಂಡರುದಾರರುಗಳಿಗೆ ಟೆಂಡರು ತಿದ್ದುಪಡಿಯನ್ನು ಪರಿಗಣಿಸಲು ಸೂಕ್ತವಾದ ಸಮಯವನ್ನು ನೀಡಲು ಸಾಧ್ಯವಾಗುವಂತೆ ಶಿವಮೊಗ್ಗ ಹಾಲು ಒಕ್ಕೂಟ ತನ್ನ ವಿವೇಚನೆಯ ಮೇರೆಗೆ ಟೆಂಡರು ಸಲ್ಲಿಸಲು ನಿಗದಿಪಡಿಸಿದ ದಿನಾಂಕವನ್ನು ಇ–ಪ್ರೊಕುರ್ ಮೆಂಟ್ ನಲ್ಲಿ ಪ್ರಚೂರ ಪಡಿಸಿ ಮುಂದುಡೂವ ಅಧಿಕಾರವನ್ನು ಒಕ್ಕೂಟವು ಹೊಂದಿರುತ್ತದೆ.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ

**5 ದಸ್ತಾವೇಜು ಒಳಗೊಂಡ ಟೆಂಡರು :**

5.1 ಟೆಂಡರುದಾರರು ಭರ್ತಿ ಮಾಡಿ ಅಪ್ ಲೋಡ್ ಮಾಡುವ ದಾಖಲಾತಿಗಳನ್ನು ಕೆಳಕಂಡಂತೆ ವಿಭಾಗ ಮಾಡುವುದು ತಾಂತ್ರಿಕ ಟೆಂಡರು ಭಾಗ – 1 ಕೆಳಕಂಡವುಗಳನ್ನು ಒಳಗೊಂಡಿರುತ್ತದೆ.

ಎ. ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ಆಹ್ವಾನಿಸುವ ನೋಟೀಸು.

ಬಿ. ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ಅರ್ಜಿ.

ಸಿ. ಟೆಂಡರು ಷರತ್ತು ಮತ್ತು ನಿಬಂಧನೆಗಳು.

ಡಿ. ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳು.

ಇ. ಕೆಲಸದ ವಿವರಣೆ.

ಎಫ್. ಇ.ಎಂ.ಡಿ. ವಿವರ.

ಜಿ. ಟೆಂಡರುದಾರರ ವಿವರ.

ಹೆಚ್. ತಾಂತ್ರಿಕ ಟೆಂಡರು ತಪಶೀಲು ಪಟ್ಟಿ (Check list)

ಮೇಲ್ಕಂಡ ದಾಖಲೆಗಳ ಜೊತೆಯಲ್ಲಿ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸಿರಬೇಕು.

1. ಟೆಂಡರುದಾರರು ಗುತ್ತಿಗೆಯನ್ನು ಹೊಂದಿರುವ ಅನುಭವ ಪ್ರಮಾಣ ಪತ್ರ.
2. ಟೆಂಡರುದಾರರು ಗುತ್ತಿಗೆಯನ್ನು ಒದಗಿಸಿದ ಗಿರಾಕಿಗಳ (Customers / Clients) ಪಟ್ಟಿ.
3. ಇ.ಎಸ್.ಐ ಲೈಸೆನ್ಸ್‌ನ ಪ್ರತಿ
4. ಪಿ.ಎಫ್ ಲೈಸೆನ್ಸ್‌ನ ಪ್ರತಿ
5. ಕಳೆದ ಮೂರು ವರ್ಷಗಳಿಂದ ಆದಾಯ ತೆರಿಗೆ ಪಾವತಿಸಿರುವ ಸಂಬಂಧ ದಾಖಲೆಗಳು.
6. ಸೇವಾತೆರಿಗೆ ನೊಂದಣಿ ಪತ್ರ

ಬಿ. ವಾಣಿಜ್ಯ ಟೆಂಡರು ಭಾಗ – 2 ಕೆಳಕಂಡವುಗಳನ್ನು ಒಳಗೊಂಡಿರುತ್ತದೆ.

ಎ. ವಾಣಿಜ್ಯ ಟೆಂಡರು ದರ ಪ್ರಸ್ತಾಪ.

ಬಿ. ವಾಣಿಜ್ಯ ಟೆಂಡರು ದರ ಅನುಸೂಚಿ (Price Schedule)

**6 ನಿಗದಿತ ದರ :**

6.1 ಟೆಂಡರುದಾರರು ದರ ಪ್ರಸ್ತಾಪದಲ್ಲಿ ನಮೂದಿಸಿದ ನಂತರ ಅಂತಿಮಗೊಳಿಸುವ ದರವು ಗುತ್ತಿಗೆಯು ಸಿಂಧುವಾಗಿರುವ ಒಂದು ವರ್ಷಗಳು ಹಾಗೂ ವಿಸ್ತರಿಸಬಹುದಾದ ಮೂರು ತಿಂಗಳು ಒಟ್ಟು ಒಂದು ವರ್ಷ ಮೂರು ತಿಂಗಳ ಅವಧಿಗೆ ವಿಸ್ತರಿಸಲು ಅವಕಾಶವಿರುತ್ತದೆ.

6.2 ಮುಂಗಡ ಹಣ ಠೇವಣಿ (EMD):

7.1 ಟೆಂಡರುದಾರರು ಟೆಂಡರಿನ ಭಾಗವಾಗಿ ಟೆಂಡರು ಆಹ್ವಾನಿಸುವ ನೋಟೀಸಿನಲ್ಲಿ ನಿಗದಿಪಡಿಸಿದಂತೆ ಇ ಪ್ರಕ್ಯೂರ್ ಮೆಂಟ್ ಮೂಲಕ ಅರ್ನೆಸ್ಟ್ ಹಣ ಠೇವಣಿಯನ್ನು (ಇ.ಎಂ.ಡಿ) ಸಲ್ಲಿಸುವುದು.

7.2 ಟೆಂಡರುದಾರರ ಅಸಮರ್ಪಕ ನಡವಳಿಕೆಯಿಂದ ಉದ್ಭವಿಸಬಹುದಾದ ಸಮಸ್ಯೆಗಳಿಂದ ಶಿವಮೊಗ್ಗ ಹಾಲು ಒಕ್ಕೂಟವನ್ನು ರಕ್ಷಿಸಲು ಭದ್ರತಾ ಹಣ ಠೇವಣಿ ಪಡೆಯಲಾಗುವುದು.

7.3 ಮೇಲ್ಕಂಡಂತೆ ಅರ್ನೆಸ್ಟ್ ಹಣ ಠೇವಣಿ ಇಲ್ಲದೆ ಸಲ್ಲಿಸಿದ ಯಾವುದೇ ಟೆಂಡರನ್ನು ಪ್ರತಿಕ್ರಿಯೆ ವ್ಯಕ್ತಪಡಿಸುವ ಟೆಂಡರು ಎಂದು ಪರಿಗಣಿಸಿ ತಿರಸ್ಕರಿಸಲಾಗುವುದು.

7.4 ಯಶಸ್ವಿಯಾಗದ ಟೆಂಡರುದಾರರ ಅರ್ನೆಸ್ಟ್ ಹಣ ಠೇವಣಿಯನ್ನು ಸಾಧ್ಯವಾದಷ್ಟು ಬೇಗ ಅಂದರೆ ಟೆಂಡರು ಸಿಂಧುತ್ವ ಅವಧಿ ಮುಗಿದ ನಂತರ 30 ದಿನಗಳಲ್ಲಿ ಬಿಡುಗಡೆಗೊಳಿಸಲಾಗುವುದು. ಅರ್ನೆಸ್ಟ್ ಹಣ ಠೇವಣಿಗೆ ಯಾವುದೇ ರೀತಿಯ ಬಡ್ಡಿ ನೀಡಲಾಗುವುದಿಲ್ಲ.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ

7.5 ಯಶಸ್ವಿ ಟೆಂಡರುದಾರರ ಅರ್ನೆಸ್ಟ್ ಹಣ ಠೇವಣಿಯನ್ನು ಟೆಂಡರುದಾರರು ಗುತ್ತಿಗೆ ಒಪ್ಪಂದವನ್ನು ಮಾಡಿಕೊಂಡ ಮತ್ತು ಭದ್ರತಾ ಠೇವಣಿಯನ್ನು ಸಲ್ಲಿಸಿದ ನಂತರ ಬಿಡುಗಡೆಗೊಳಿಸಲಾಗುವುದು.

7.6 ಅರ್ನೆಸ್ಟ್ ಹಣ ಠೇವಣಿ ಮಟ್ಟುಗೋಲು :

ಟೆಂಡರುದಾರರು ಶಿವಮೊಗ್ಗ ಹಾಲು ಒಕ್ಕೂಟವು ನಿಗದಿಪಡಿಸಿದ ಟೆಂಡರು ಸಿಂಧುವಾಗಿರುವ ಅವಧಿಯಲ್ಲಿ ದರವನ್ನು ನಮೂದಿಸಿರುವ ಟೆಂಡರನ್ನು ಗೌರವಿಸಲು ವಿಫಲರಾದಲ್ಲಿ ಅಥವಾ ದರ ಪ್ರಸ್ತಾಪವನ್ನು (Price offer) ವಾಪಸ್ಸು ಪಡೆದಲ್ಲಿ ಅಥವಾ ಯಶಸ್ವಿ ಟೆಂಡರುದಾರರ ಪ್ರಕರಣದಲ್ಲಿ :

1. ಗುತ್ತಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಟೆಂಡರುದಾರರು ವಿಫಲರಾದಲ್ಲಿ.
2. ಭದ್ರತಾ ಠೇವಣಿಯನ್ನು ಸಲ್ಲಿಸಲು ಟೆಂಡರುದಾರರು ವಿಫಲರಾದಲ್ಲಿ.

7.7 ಈ ಹಿಂದೆ ಸಲ್ಲಿಸಿದ್ದ ಅರ್ನೆಸ್ಟ್ ಹಣ ಠೇವಣಿ ಮೊತ್ತ ಅಥವಾ ಭದ್ರತಾ ಠೇವಣಿ ಇದ್ದಲ್ಲಿ ಅದನ್ನು ಪ್ರಸಕ್ತ ಟೆಂಡರಿಗೆ ವರ್ಗಾಯಿಸಲು ಅವಕಾಶವಿಲ್ಲ. ಆದ್ದರಿಂದ ಟೆಂಡರಿನೊಂದಿಗೆ ಹೊಸದಾಗಿ ಅರ್ನೆಸ್ಟ್ ಹಣವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

7.8 ಗುತ್ತಿಗೆದಾರರು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ, 1961ರ ಪ್ರಕಾರ ನೊಂದಾಯಿಸಿದ ಬಗ್ಗೆ ಪಡೆದ ಚಾಲ್ತಿಯಲ್ಲಿರುವ ಪ್ರಮಾಣ ಪತ್ರ, ಭವಿಷ್ಯನಿಧಿ(PF) ಮತ್ತು ನೌಕರರ ರಾಜ್ಯ ವಿಮಾ (ESI) ಕೋಡ್ ನಂಬರ್, ಸೇವಾ ತೆರಿಗೆ ನೊಂದಣಿ ಪತ್ರ ಹೊಂದಿರಬೇಕು.

**1. ಟೆಂಡರು ಸಿಂಧುತ್ವ ಅವಧಿ :**

8.1 ವಾಣಿಜ್ಯ ಟೆಂಡರು ಭಾಗ – 2 ನಮೂದಿಸಿರುವ ದರವು ತಾಂತ್ರಿಕ ಟೆಂಡರು ಭಾಗ – 1 ತೆರೆದ ನಂತರ 120 ದಿನಗಳವರೆಗೆ ಸಿಂಧುವಾಗಿರಬೇಕು.

8.2 ವಿಶೇಷ ಸಂದರ್ಭಗಳಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಟೆಂಡರು ಸಿಂಧುತ್ವ ಅವಧಿಯನ್ನು ವಿಸ್ತರಿಸುವ ಬಗ್ಗೆ ಟೆಂಡರುದಾರರ ಸಮ್ಮತಿಗಾಗಿ ಕೇಳಿಕೊಳ್ಳಬಹುದು.

2. ಟೆಂಡರು ದಸ್ತಾವೇಜುಗಳ ಸಹಿ :

9.1 ಟೆಂಡರುದಾರರು ತಾಂತ್ರಿಕ ಟೆಂಡರು ಭಾಗ – 1 ಮತ್ತು ವಾಣಿಜ್ಯ ಟೆಂಡರು ಭಾಗ – 2 ಇವುಗಳ ಮೂಲ ಪ್ರತಿಗಳಲ್ಲಿ ತಾವೇ ಸಹಿ ಮಾಡಬೇಕು. ಅಥವಾ ಟೆಂಡರುದಾರರನ್ನು ಗುತ್ತಿಗೆಗೆ ಬದ್ಧಗೊಳಿಸುವ ಅಧಿಕೃತಗೊಂಡ ವ್ಯಕ್ತಿಗಳು ಸಹಿ ಮಾಡಬೇಕು. ಯಾವುದೇ ಜಾಗಗಳನ್ನು ಖಾಲಿ ಬಿಡಬಾರದು. ಈ ಬಗ್ಗೆ ಸಂದೇಹ ಇದ್ದಲ್ಲಿ ಅಥವಾ ವಾಣಿಜ್ಯ ದರ ಅನುಸೂಚಿ ಹೊರತುಪಡಿಸಿ ಟೆಂಡರು ದಸ್ತಾವೇಜು ಭರ್ತಿ ಮಾಡಲು ಸಹಾಯ ಅಗತ್ಯವಿದ್ದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಆಡಳಿತ ವಿಭಾಗವನ್ನು ಸಂಪರ್ಕಿಸಬಹುದು. ಟೆಂಡರು ದಸ್ತಾವೇಜಿನ ಎಲ್ಲಾ ಪುಟಗಳಿಗೂ ತಪ್ಪದೇ ಸಹಿ ಮಾಡಿ ಅಪ್‌ಲೋಡ್ ಮಾಡುವುದು.

9.2 ಯಾವುದೇ ತಿದ್ದುಪಡಿ, ಹೊಡೆದು ಹಾಕಿರುವುದನ್ನು ಟೆಂಡರುದಾರರು ಅಥವಾ ಅಧಿಕೃತ ಸಹಿದಾರರು ದೃಢೀಕರಿಸಿ ಸಹಿ ಮಾಡಿ ಅಪ್‌ಲೋಡ್ ಮಾಡಬೇಕು.

**3. ಟೆಂಡರುಗಳ ಸಲ್ಲಿಸುವಿಕೆ :**

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ

**4 ಟೆಂಡರುಗಳನ್ನು ತೆರೆಯುವುದು :**

12.3 ಟೆಂಡರು ತೆರೆಯುವ ಸಮಯದಲ್ಲಿ ಪಾಲ್ಗೊಂಡು ಟೆಂಡರುದಾರರ ಹೆಸರು, ಸಲ್ಲಿಸಿದ ಇ.ಎಂ.ಡಿ. ವಿವರ ಮತ್ತು ಸೂಕ್ತವಾದ ಟೆಂಡರು ವಿವರಗಳನ್ನು ಓದಿಹೇಳಲಾಗಿದೆ (announced). ವಾಣಿಜ್ಯ ಟೆಂಡರು ತೆರೆಯುವ ಹಾಗೂ ದರ ನಿಷ್ಕರ್ಷೆ ಮಾಡುವ ದಿನಾಂಕವನ್ನು ತಾಂತ್ರಿಕ ಟೆಂಡರು ತೆರೆಯುವ ದಿನಾಂಕದಂದು ನಿರ್ಧರಿಸಲಾಗುವುದು.

12.4 ಟೆಂಡರಿನ ವಾಣಿಜ್ಯ ಟೆಂಡರು ಭಾಗ–2ನ್ನು ತೆರೆಯುವ ಮತ್ತು ಪರಿಗಣಿಸುವ ಮೊದಲು ಟೆಂಡರುದಾರ ಅರ್ಹತೆ, ಸೂಕ್ತತೆ, ಅನುಭವ, ಗಿರಾಕಿಗಳ ಮುಂತಾದ ವಿಷಯಗಳ ಮೌಲ್ಯಮಾಪನ ಮಾಡಿ ಪರಿಗಣಿಸಿ ಇತ್ಯರ್ಥಪಡಿಸಲಾಗುವುದು.

12.5 ತಾಂತ್ರಿಕ ವಾಣಿಜ್ಯ ಟೆಂಡರು ಭಾಗ–1ರಲ್ಲಿ ನಿಗದಿಪಡಿಸಿದ ಷರತ್ತು ಮತ್ತು ನಿಬಂಧನೆಗಳ ರೀತ್ಯಾ ಅರ್ಹತೆಯನ್ನ ಗಳಿಸಿದ ಮತ್ತು ಆಯ್ಕೆಗೊಂಡ ಟೆಂಡರುದಾರರು ದರ ನಮೂದಿಸಿ ಸಲ್ಲಿಸಿದ ವಾಣಿಜ್ಯ ಟೆಂಡರು ಭಾಗ–2 ನ್ನು ಮಾತ್ರ ಪರಿಗಣಿಸಲಾಗುವುದು.

## 12 ಟೆಂಡರುಗಳ ಪರಿಶೀಲನೆ :

13.1 ಟೆಂಡರುಗಳು ಪರಿಪೂರ್ಣವಾಗಿವೆಯೇ ಎಂಬ ಬಗ್ಗೆ ಪರಿಶೀಲಿಸಲಾಗುವುದು.

13.2ತಾಂತ್ರಿಕ ಟೆಂಡರು ಭಾಗ–1ರಲ್ಲಿ ನಿಗದಿಪಡಿಸಿದ ಯಾವುದೇ ಒಂದು ಅಥವಾ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸದ ಟೆಂಡರುದಾರರು ಸಲ್ಲಿಸಿದ ವಾಣಿಜ್ಯ ಟೆಂಡರು ಭಾಗ–2ನ್ನು ತೆರೆಯಲಾಗುವುದಿಲ್ಲ ಹಾಗೂ ಪರಿಗಣಿಸಲಾಗುವುದಿಲ್ಲ.
ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

13.3ತಾಂತ್ರಿಕ ಟೆಂಡರು ಭಾಗ–1ರಲ್ಲಿ ನಮೂದಿಸಿದ ಎಲ್ಲಾ ಮಾಹಿತಿ/ಹೇಳಿಕೆಯನ್ನು ಪರಿಶೀಲಿಸುವ ಹಾಗೂ ಅಗತ್ಯವಿದ್ದಲ್ಲಿ ಹೆಚ್ಚುವರಿ ಮಾಹಿತಿಯನ್ನು ಕೇಳುವ ಅಧಿಕಾರವನ್ನು ಶಿವಮೊಗ್ಗ ಹಾಲು ಒಕ್ಕೂಟವು ಕಾದಿರಿಸಿಕೊಂಡಿದೆ.

## 13 ಟೆಂಡರುಗಳ ಮೌಲ್ಯಮಾಪನ :

14.1 ಟೆಂಡರುಗಳನ್ನು ತಾಂತ್ರಿಕ ಕ್ಷಮತೆ ಮತ್ತು ಗುತ್ತಿಗೆ ಸೇವೆಗೆ ಸಂಬಂಧಿಸಿದ ಸಲ್ಲಿಸಿದ ವಿವರಗಳನ್ನು ಪರಿಗಣಿಸಿ ಮೌಲ್ಯಮಾಪನ ಮಾಡಲಾಗುವುದು. ಕಾರ್ಯ್ದಿಯನ್ವಯ ಕನಿಷ್ಟ ವೇತನ, ತುಟ್ಟಿಭತ್ಯೆ, ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ ಮತ್ತು ಸೇವಾ ವೆಚ್ಚ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಶಾಸನಬದ್ಧ ಹೊಣೆಗಾರಿಕೆಗಳಿಗಿಂತ ವಾಣಿಜ್ಯ ಟೆಂಡರಿನಲ್ಲಿ ನಮೂದಿಸಿರುವ ದರವು ಕಡಿಮೆಯಾದಲ್ಲಿ ಅದನ್ನು ತಿರಸ್ಕರಿಸಲಾಗುವುದು.

## 14 ಗುತ್ತಿಗೆ ನೀಡಲು ಮಾನದಂಡ :

15.1 ಟೆಂಡರು ದಸ್ತಾವೇಜುಗಳಿಗೆ ಎಲ್ಲಾ ವಿಧದಲ್ಲಿ ವಾಸ್ತವಿಕವಾಗಿ ಪ್ರತಿಕ್ರಿಯಿಸುವ (Substantially responsive) ರೀತಿಯಲ್ಲಿರುವುದಾಗಿ ಪರಿಗಣಿಸಲಾದ ಟೆಂಡರು ಮತ್ತು ಕಡಿಮೆ ದರ ನಮೂದಿಸಿದ ಟೆಂಡರುದಾರರಿಗೆ ಶಿವಮೊಗ್ಗ ಹಾಲು ಒಕ್ಕೂಟ ಗುತ್ತಿಗೆ ಆದೇಶವನ್ನು ನೀಡುವುದು. ಆದಾಗ್ಯೂ ಟೆಂಡರುದಾರರಿಗೆ ಗುತ್ತಿಗೆಯನ್ನು ಸಮರ್ಥವಾಗಿ ನಿರ್ವಹಿಸುವ ಅರ್ಹತೆ ಮತ್ತು ಸಂಪನ್ಮೂಲ ಇರಬೇಕು.

ಟೆಂಡರುದಾರರ ಸಹಿ

**16. ಶಿವಮೊಗ್ಗ ಹಾಲು ಒಕ್ಕೂಟದ ಹಕ್ಕುಗಳು :**

16.1 ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಮತ್ತು ಗುತ್ತಿಗೆ ನೀಡುವ ಮೊದಲು ಯಾವುದೇ ಸಮಯದಲ್ಲಿ ಟೆಂಡರು ಪ್ರಕ್ರಿಯೆಯನ್ನು ರದ್ದುಗೊಳಿಸುವ ಮತ್ತು ಕಡಿಮೆ ದರ ನಮೂದಿಸಿದ ಟೆಂಡರುದಾರರೊಂದಿಗೆ ಮಾತ್ರ ದರಗಳನ್ನು ನಿಷ್ಕರ್ಷೆ ಮಾಡುವ ಅಥವಾ ಒಪ್ಪಿಕೊಳ್ಳುವ/ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಟೆಂಡರು ಅಂಗೀಕರಿಸುವ ಪ್ರಾಧಿಕಾರ ಸಮಿತಿಯು ಕಾದಿರಿಸಿಕೊಂಡಿದೆ. ಟೆಂಡರು ದರ ಅನುಸೂಚಿಯಲ್ಲಿ ಒಳಗೊಂಡಿರುವುದು ಏನೇ ಆದಾಗ್ಯೂ ಕಡಿಮೆ ದರ ನಮೂದಿಸಿದ ಟೆಂಡರನ್ನು ಅಂಗೀಕರಿಸುವ ಕುರಿತು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ನಿರ್ಬಂಧ ಇರುವುದಿಲ್ಲ. ಆ ಕಾರಣದಿಂದ ಬಾಧಿತರಾದ ಟೆಂಡರುದಾರರಿಗೆ ಶಿವಮೊಗ್ಗ ಹಾಲು ಒಕ್ಕೂಟವು ಯಾವುದೇ ಹೊಣೆಗೆ ಗುರಿಯಾಗುವುದಿಲ್ಲ. ಅಥವಾ ಶಿವಮೊಗ್ಗ ಹಾಲು ಒಕ್ಕೂಟವು ಕ್ರಮ ಕೈಗೊಂಡ ಬಗ್ಗೆ ಕಾರಣಗಳನ್ನು ಬಾಧಿತ ಟೆಂಡರುದಾರರಿಗೆ ತಿಳಿಸಬೇಕಾದ ಅಂಗೀಕಾರ ಸಮಿತಿ ಕೈಗೊಳ್ಳುವ ತೀರ್ಮಾನವೇ ಅಂತಿಮ ಮತ್ತು ಅದು ಟೆಂಡರುದಾರರನ್ನು ಬದ್ದಗೊಳಿಸುತ್ತದೆ. ಈ ಬಗ್ಗೆ ಯಾವುದೇ ಪತ್ರವ್ಯವಹಾರಕ್ಕೆ ಅವಕಾಶವಿಲ್ಲ.

16.2 ಷರತ್ತು ಪೂರ್ವಕ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ. ಟೆಂಡರುದಾರರು ಟೆಂಡರು ದಸ್ತಾವೇಜಿನೊಂದಿಗೆ ಶಿವಮೊಗ್ಗ ಹಾಲು ಒಕ್ಕೂಟದ ಷರತ್ತುಗಳಿಗೆ ಪ್ರತಿಯಾಗಿ ಯಾವುದೇ ಷರತ್ತುಗಳನ್ನು ವಿಧಿಸಬಾರದು. ಒಂದು ವೇಳೆ ವಿಧಿಸಿದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಅದಕ್ಕೆ ಬದ್ಧವಲ್ಲ.

16.3 ಗುತ್ತಿಗೆಯನ್ನು ನೀಡುವಾಗ ದರದಲ್ಲಿ ಅಥವಾ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಮಾಡದೆ ಕೆಲಸದ ಪರಿಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಅಧಿಕಾರವನ್ನು ಶಿವಮೊಗ್ಗ ಹಾಲು ಒಕ್ಕೂಟವು ಕಾದಿರಿಸಿಕೊಂಡಿದೆ.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ

**17. ತೀರ್ಪು ಪ್ರಕಟಣೆ :**

17.1 ಟೆಂಡರಿನ ಸಿಂಧುತ್ವ ಅವಧಿ ಮುಕ್ತಾಯಗೊಳ್ಳುವ ಮೊದಲು ಶಿವಮೊಗ್ಗ ಹಾಲು ಒಕ್ಕೂಟವು ಟೆಂಡರು ಅಂಗೀಕೃತಗೊಂಡ ಬಗ್ಗೆ ಯಶಸ್ವಿ ಟೆಂಡರುದಾರರಿಗೆ ಬರವಣಿಗೆಯಲ್ಲಿ ಖುದ್ದಾಗಿ ನೊಂದಾಯಿತ ಅಂಚೆ, ಫ್ಯಾಕ್ಸ್, ಇ–ಮೇಲ್ ಮೂಲಕ ತಿಳಿಸುತ್ತದೆ. ಟೆಂಡರು ಅಂಗೀಕೃತಗೊಂಡ ಅಥವಾ ತಿರಸ್ಕೃತಗೊಂಡ ಬಗ್ಗೆ ಯಾವುದೇ ವಿಚಾರಣೆಯನ್ನು ಪ್ರತಿಕ್ರಿಯಿಸಲಾಗುವುದಿಲ್ಲ.

17.2 ಈ ರೀತಿ ಪ್ರಕಟಿಸಿದ ತೀರ್ಪು ಗುತ್ತಿಗೆಯ ರಚನೆಗೆ ಕಾರಣವಾಗುತ್ತದೆ.

17.3 ಯಶಸ್ವಿ ಟೆಂಡರುದಾರು ಭದ್ರತಾ ಠೇವಣಿ ಪಾವತಿಸಿ ಒಪ್ಪಂದವನ್ನು ಮಾಡಿಕೊಂಡ ನಂತರ ಶಿವಮೊಗ್ಗ ಹಾಲು ಒಕ್ಕೂಟ ಟೆಂಡರುದಾರರ ಅರ್ನೆಸ್ಟ್ ಠೇವಣಿಯನ್ನು ಹಿಂದಿರುಗಿಸುವುದು.

**18. ಗುತ್ತಿಗೆ ವರ್ಗಾವಣೆ :**

18.1 ಯಾವುದೇ ಕಾರಣಕ್ಕಾಗಿಯಾಗಲೀ ಗುತ್ತಿಗೆ ಪ್ರಾರಂಭದ ಮೊದಲು ಅಥವಾ ಗುತ್ತಿಗೆ ಪ್ರಾರಂಭವಾದ ನಂತರ ಗುತ್ತಿಗೆಯು ವರ್ಗಾವಣೆಯಾಗತಕ್ಕದಲ್ಲ. ಗುತ್ತಿಗೆಯ ಹಕ್ಕನ್ನು ಯಾವುದೇ ರೀತಿಯಲ್ಲಿ ಬೇರೆಯವರಿಗೆ ವಹಿಸಲು ಗುತ್ತಿಗೆಯಲ್ಲಿ ನಿಗದಿಪಡಿಸಿರುವ ಜವಾಬ್ದಾರಿಯನ್ನು ತ್ಯಜಿಸಲು ಅವಕಾಶವಿಲ್ಲ.

18.2 ಗುತ್ತಿಗೆ ವರ್ಗಾವಣೆಯ ಯಾವುದೇ ಮನವಿಯನ್ನು ಷರತ್ತುಗಳನ್ನು ಪಾಲಿಸಿಲ್ಲವೆಂದು ಪರಿಗಣಿಸಲಾಗುವುದು ಮತ್ತು ಅರ್ನೆಸ್ಟ್ ಹಣ ಠೇವಣಿ ಅಥವಾ ಭದ್ರತಾ ಠೇವಣಿಯನ್ನು ಮುಟ್ಟು ಗೋಲು ಹಾಕಿಕೊಳ್ಳಲಾಗುವುದು.

**19. ಭದ್ರತಾ ಠೇವಣಿ :**

19.1 ಒಪ್ಪಿಗೆ ಪತ್ರ ತಲುಪಿತ 15 ದಿನಗಳೊಳಗೆ ಯಶಸ್ವಿ ಟೆಂಡರುದಾರರು ಗುತ್ತಿಗೆಯನ್ನು ನಿರ್ವಹಿಸುವುದಕ್ಕೆ ಖಾತರಿಯಾಗಿ ಟೆಂಡರಿನಲ್ಲಿ ಇತ್ಯರ್ಥಗೊಂಡ ಒಂದು ತಿಂಗಳ ಟೆಂಡರ್ ಮೊತ್ತವನ್ನು (ಗುತ್ತಿಗೆ ಹಣ) ಭದ್ರತಾ ಠೇವಣಿಯಾಗಿ ಸಲ್ಲಿಸಬೇಕು.

19.2 ಭದ್ರತಾ ಠೇವಣಿಯು ಈ ಕೆಳಗೆ ನಮೂದಿಸಿದಂತೆ ಇರಬೇಕು.

ರಾಷ್ಟ್ರೀಕೃತ : ಶೆಡ್ಯೂಲ್ಡ್ ಬ್ಯಾಂಕಿನಿಂದ "Managing Director Shimoga Milk Union" ಇವರ ಹೆಸರಿನಲ್ಲಿ ಶಿವಮೊಗ್ಗದಲ್ಲಿ ಪಾವತಿಯಾಗುವಂತೆ ಪಡೆದ ಡಿಮ್ಯಾಂಡ್ ಡ್ರಾಫ್ಟ್: ಬ್ಯಾಂಕರ್ ಚೆಕ್: ಪೇ ಆರ್ಡರ್ ರೂಪದಲ್ಲಿ ಇರಬೇಕು. ಅಥವಾ ಭದ್ರತಾ ಠೇವಣಿಯನ್ನು ನಗದು ರೂಪದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಹಣಕಾಸು ವಿಭಾಗಕ್ಕೆ ಪಾವತಿಸಬೇಕು. ಭದ್ರತಾ ಠೇವಣಿಯಾಗಿ ಭದ್ರತೆಯ ರೂಪದಲ್ಲಿ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕಿನಿಂದ ಪಡೆದ ಗುತ್ತಿಗೆ ಅವಧಿ, ಗುತ್ತಿಗೆ ವಿಸ್ತರಣೆ ಅವಧಿ ಮತ್ತು ಕ್ಲೇಮ್ ಅವಧಿ ಒಳಗೊಂಡು ಗುತ್ತಿಗೆ ಪ್ರಾರಂಭವಾಗುವ ದಿನಾಂಕದಿಂದ ಒಟ್ಟು ಒಂದು ವರ್ಷ ಆರು ತಿಂಗಳ ಅವಧಿಗೆ ಸಿಂಧುವಾದ ಹಿಂದಕ್ಕೆ ತೆಗೆದುಕೊಳ್ಳಲಾಗದ/ರದ್ದುಪಡಿಸಲಾಗದ (Irrevocable) ಮತ್ತು ಯಾವುದೇ ಷರತ್ತಿಲ್ಲದ (Unconditional) ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಇರತಕ್ಕದ್ದು.

19.3 ಯಶಸ್ವಿ ಟೆಂಡರುದಾರರು ಟೆಂಡರು ಷರತುಗಳ ಉಪಬಂಧಗಳನ್ನು ಪಾಲಿಸಲು ವಿಫಲರಾದಲ್ಲಿ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಲು ಮತ್ತು ಅರ್ನೆಸ್ಟ್ ಹಣ ಠೇವಣಿ/ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸಾಕಷ್ಟು ಆಧಾರವಾಗುತ್ತದೆ.

20. ಯಶಸ್ವಿ ಟೆಂಡರುದಾರರು ರೂ. 100–00 ಸದಸ್ಯತ್ವ ಶುಲ್ಕವನ್ನು ಪಾವತಿಸಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿ ಒಕ್ಕೂಟದ ನಾಮಪತ್ರ ಸದಸ್ಯತ್ವವನ್ನು ಪಡೆಯಬೇಕು.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ

**21. ಒಪ್ಪಂದ ಸಹಿ ಮಾಡುವುದು:**

21.1 ಟೆಂಡರು ಅಂಗೀಕೃತಗೊಂಡ ಬಗ್ಗೆ ಯಶಸ್ವಿ ಟೆಂಡರುದಾರರಿಗೆ ಶಿವಮೊಗ್ಗ ಹಾಲು ಒಕ್ಕೂಟವು ಒಪ್ಪಿಗೆ ಪತ್ರವನ್ನು ನೀಡಿದ ಕೂಡಲೇ ನಿಗದಿತ ಒಪ್ಪಂದದ ಪ್ರತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದಿಂದ ಪಡೆದು ಅದರ ರೀತ್ಯಾ 15 ದಿನಗಳೊಳಗೆ 200.00 ರೂ,ಗಳ ಛಾಪಾ ಕಾಗದದಲ್ಲಿ (Non judicial) ಒಪ್ಪಂದವನ್ನು ಮಾಡಿಕೊಳ್ಳಬೇಕು.

ಸಹಿ
ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ ಹಾಲು ಒಕ್ಕೂಟ

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ
ಮತ್ತು ಮೋಹರು

# ಅನುಬಂಧ – ಡಿ

ಶಿವಮೊಗ್ಗ ಹಾಲು ಒಕ್ಕೂಟದಲ್ಲಿ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ತುಂಬಿಸುವ ಯಂತ್ರಗಳ ದುರಸ್ಥಿ ಮತ್ತು ನಿರ್ವಹಣೆಯ ಗುತ್ತಿಗೆಯ ಬಗ್ಗೆ ಷರತ್ತು ಮತ್ತು ನಿಬಂಧನೆಗಳು :

1.0 ಗುತ್ತಿಗೆಯ ಸಿಂಧುತ್ವ :

1.1 ಗುತ್ತಿಗೆ ಅವಧಿಯು ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಇರುತ್ತದೆ.

1.2 ಕರಾರನ್ನು ಸಹಿ ಮಾಡಿದ ಮತ್ತು ನಿಗಧಿಪಡಿಸಿದ ಭದ್ರತಾ ಠೇವಣಿಯನ್ನು ಸಲ್ಲಿಸಿದ ನಂತರ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸುವ ದಿನಾಂಕದಿಂದ ಗುತ್ತಿಗೆಯು ಪ್ರಾರಂಭವಾಗುವುದು.

1.3 ಗುತ್ತಿಗೆ ಅವಧಿ ಮುಕ್ತಾಯಗೊಂಡ ನಂತರ ಶಿವಮೊಗ್ಗ ಹಾಲು ಒಕ್ಕೂಟದ ವಿವೇಚನೆಯ ಮೇರೆಗೆ ಪ್ರಸ್ತುತ ಗುತ್ತಿಗೆಯನ್ನು ಮೇಲಿನ ಕರಾರಿನ ಅನ್ವ0ಯ ಷರತ್ತುಗಳಿಗೆ ಒಳಪಟ್ಟು ಚಾಲ್ತಿಯಲ್ಲಿರುವ ದರದಲ್ಲಿಯೇ ಗುತ್ತಿಗೆ ಅವಧಿಯನ್ನು ಮೂರು ತಿಂಗಳು ಅಥವಾ ಈ ವೇಳೆ0ಯಲ್ಲಿ ಬದಲಿ ವ್ಯವಸ್ಥೆ0ಯಾಗುವ ವರೆಗೂ 0ಯಾವುದು ಮೊದಲೊ ಈ ಅವಧಿಗೆ ವಿಸ್ತರಿಸುವ ಅಧಿಕಾರವನ್ನು ಶಿವಮೊಗ್ಗ ಹಾಲು ಒಕ್ಕೂಟವು ಹೊಂದಿರುತ್ತದೆ.

2.0 ಗುತ್ತಿಗೆ ದರ :

2.1 ವಿಸ್ತರಿಸಿದ ಅವಧಿ ಒಳಗೊಂಡ ಗುತ್ತಿಗೆ ಅವಧಿಯಲ್ಲಿ ಗುತ್ತಿಗೆ ದರವು ಯಾವುದೇ ಹೆಚ್ಚಳ/ಇಳಿಕೆ ಇಲ್ಲದೆ ಸ್ಥಿರವಾಗಿ ಇರುತ್ತದೆ.

2.2 ಒಪ್ಪಂದದ ಪ್ರಕಾರ ಪೂರ್ಣವಾಗಿ ಮತ್ತು ತೃಪ್ತಿಕರವಾಗಿ ನಿರ್ವಹಿಸಿದ ಕೆಲಸಕ್ಕೆ ಗುತ್ತಿಗೆ ಮೊತ್ತವನ್ನು ಶಿವಮೊಗ್ಗ ಹಾಲು ಒಕ್ಕೂಟದಿಂದ ಗುತ್ತಿಗೆಯನ್ನು ಪಡೆದ ಗುತ್ತಿಗೆದಾರರಿಗೆ ಪಾವತಿಸಲಾಗುವುದು.

3.0 ಹಣ ಪಾವತಿ :

3.1 ಗುತ್ತಿಗೆದಾರರು ಪ್ರತಿ ತಿಂಗಳು ನಿರ್ವಹಿಸಿದ ಕೆಲಸದ ಮತ್ತು ನಿಯೋಜಿಸಿದ ನೌಕರರ ವಿವರವನ್ನು ಒಳಗೊಂಡ ಬಿಲ್ಲನ್ನು ನಿಗಧಿಪಡಿಸಿದ ನಮೂನೆಯಲ್ಲಿ ಹಾಗೂ ದ್ವಿಪ್ರತಿಯಲ್ಲಿ ಡೈರಿಗೆ ಸಲ್ಲಿಸಬೇಕು. ಅವಶ್ಯಕತೆಗನುಗುಣವಾಗಿ ನಿಗಧಿಪಡಿಸಿದ ಕೆಲಸವನ್ನು ತೃಪ್ತಿಕರವಾಗಿ ನಿರ್ವಹಿಸಿದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಪರಿಶೀಲನೆ ಮತ್ತು ದೃಢೀಕರಣದ ಆಧಾರದಲ್ಲಿ ನಿರ್ವಹಿಸಿದ ಕೆಲಸಕ್ಕನುಗುಣವಾಗಿ ಆದಾಯ ತೆರಿಗೆಯ ಕಟಾವಣೆ ಒಳಗೊಂಡಂತೆ ಎಲ್ಲಾ ಶಾಸನಬದ್ಧ ಕಟಾವಣೆ ಮತ್ತು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಬರಬೇಕಾದ ಮೊತ್ತ ಹಾಗೂ ವಿಧಿಸಬಹುದಾದ ದಂಡಗಳ ಕಟಾವಣೆ ಮಾಡಿ ಉಳಿಕೆ ಮೊತ್ತವನ್ನು ಚೆಕ್ ಮುಖೇನ ಗುತ್ತಿಗೆದಾರರಿಗೆ ಪಾವತಿಸಲಾಗುವುದು.

3.2 ಗುತ್ತಿಗೆದಾರರು ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಹಣ ಪಡೆಯಲು ಇಚ್ಛಿಸಿದಲ್ಲಿ ತಾವೇ ಸ್ವತಃ ಡಿ.ಡಿ. ವೆಚ್ಚವನ್ನು ಭರಿಸಬೇಕಾಗುತ್ತದೆ.

4.0 ಗುತ್ತಿಗೆದಾರರು ಶಿವಮೊಗ್ಗ ಹಾಲು ಒಕ್ಕೂಟದಲ್ಲಿ ಗುತ್ತಿಗೆಯನ್ನು ನಿರ್ವಹಿಸುವ ಅವಧಿಯಲ್ಲಿ ಶಿವಮೊಗ್ಗ ಹಾಲು ಒಕ್ಕೂಟದಿಂದ ಪಡೆಯುವ ಅಥವಾ ಲಭ್ಯವಾಗುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಉತ್ಪಾದನೆ, ಮಾರಾಟ/ಮರುಕಟ್ಟೆ, ಡೈರಿಯ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದ ಲಿಖಿತ ಮತ್ತು ಮೌಖಿಕ ಮಾಹಿತಿಯನ್ನು ಯಾರಿಗೂ ಬಯಲು ಮಾಡಬಾರದು ಮತ್ತು ಅಂತಹ ಮಾಹಿತಿಯ ರಹಸ್ಯವನ್ನು ಕಾಪಾಡಬೇಕು.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ
ಮತ್ತು ಮೊಹರು

5.0 ಗುತ್ತಿಗೆ ಅವಧಿಯಲ್ಲಿ ಸರ್ಕಾರವು ಕನಿಷ್ಟ ವೇತನ ಕಾಯಿದೆ, 1948 ರ ಅಡಿಯಲ್ಲಿ ಸರ್ಕಾರಿ ಪ್ರಕಟಣೆ ಸಂಖ್ಯೆ: ದಿನಾಂಕ:16-11-1996 ರಲ್ಲಿ ಹಾಲು, ಮೊಸರು ಮತ್ತು ತುಪ್ಪವನ್ನು ಶೇಖರಣೆ, ಸಂಸ್ಕರಣೆ ಮತ್ತು ವಿತರಣೆ ಗುತ್ತಿಗೆ ಕೆಲಸದಲ್ಲಿ ತೊಡಗಿಸುವ ದರಗಳನ್ನು ನಿಗಧಿಪಡಿಸಿರುವ ಹಾಗೂ ಕಾಲ ಕಾಲಕ್ಕೆ ಪರಿಷ್ಕರಿಸುವ ಕನಿಷ್ಟ ವೇತನ ಮಜೂರಿ ದರಗಳನ್ನು ಮತ್ತು ತುಟ್ಟಿಭತ್ಯೆಯನ್ನು ಪಾವತಿಸಲು ಗುತ್ತಿಗೆದಾರರು ಬದ್ಧರಿರಬೇಕು.

5.1 ಗುತ್ತಿಗೆ ಕೆಲಸಗಾರರಿಂದ ಪ್ರತಿ ದಿನ 8 ಘಂಟೆಗಳಿಗೂ ಹೆಚ್ಚು ಅವಧಿಯ ಕೆಲಸವನ್ನು ಮಾಡಿಸಬಾರದು. ಮಹಿಳಾ ಕೆಸಲಗಾರರನ್ನು ರಾತ್ರಿ ಪಾಳಿಯಲ್ಲಿ ಕೆಲಸಕ್ಕೆ ನಿಯೋಜಿಸಬಾರದು. ಕಡ್ಡಾಯವಾಗಿ ವೇತನದೊಂದಿಗೆ ವಾರದ ರಜೆ ನೀಡಬೇಕು. ಇಲ್ಲದಿದ್ದಲ್ಲಿ ಕಾನೂನಿನನ್ವಯ ರಜಾ ವೇತನ ಮತ್ತು ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡಬೇಕು. ಗುತ್ತಿಗೆದಾರರು ಒದಗಿಸುವ ಕೆಲಸಗಾರರಿಗೆ ಭವಿಷ್ಯನಿಧಿ, ನೌಕರರ ರಾಜ್ಯ ವಿಮಾ ವಂತಿಗೆ ಮತ್ತು ಆಡಳಿತಾತ್ಮಕ ವೆಚ್ಚ ಒಳಗೊಂಡ ಎಲ್ಲಾ ಖರ್ಚುಗಳನ್ನು ಭರಿಸಿ ಶಾಸನಾತ್ಮಕ ಸೌಲಭ್ಯಗಳನ್ನು ನೀಡಬೇಕು. ಗುತ್ತಿಗೆದಾರರು ತಾವು ನಿಯೋಜಿಸುವ ಕೆಲಸಗಾರರಿಗೆ ಬೋನಸ್ ಹಾಗು ಉಪಧನ ಪಾವತಿ ಬಗ್ಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಜವಾಬ್ದಾರರಾಗಿರುತ್ತಾರೆ. ಗುತ್ತಿಗೆ ಕೆಲಸಗಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಸಹಜ ನ್ಯಾಯದ ನಿಯಮಗಳನ್ನು ಗುತ್ತಿಗೆದಾರರು ಅನುಸರಿಸಬೇಕು. ಪ್ರತಿ ತಿಂಗಳ 10ನೇ ತಾರೀಖಿನ ಮೊದಲು ಗುತ್ತಿಗೆದಾರರು ವೇತನವನ್ನು ಪಾವತಿಸಬೇಕು.

6.0 ಶಿವಮೊಗ್ಗ ಹಾಲು ಒಕ್ಕೂಟದ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಸಂಭವಿಸಬಹುದಾದ ಯಾವುದೇ ಅಪಘಾತಗಳಿಂದ ಗುತ್ತಿಗೆದಾರರು ನಿಯೋಜಿಸುವ ಕೆಲಸಗಾರರಿಗೆ ಊನ ಅಥವಾ ಅಂಗಹೀನತೆ ಉಂಟಾದಲ್ಲಿ ಅಥವಾ ಸಾವು-ನೋವು ಸಂಭವಿಸಿದಲ್ಲಿ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ ಹಾಗೂ ಸಂಬಂಧಿಸಿದ ಕಾನೂನು/ನಿಯಮಗಳಲ್ಲಿ ಸೂಚಿಸಿದಂತೆ ಈ ಬಗ್ಗೆ ತಗಲುವ ವೆಚ್ಚ/ಸೌಲಭ್ಯಗಳನ್ನು ಮತ್ತು ಪರಿಹಾರವನ್ನು ಪಾವತಿಸಲು ಗುತ್ತಿಗೆದಾರರೇ ಹೊಣೆಯಾಗಿರುತ್ತಾರೆ.

7.0 ಶಿವಮೊಗ್ಗ ಹಾಲು ಒಕ್ಕೂಟದಲ್ಲಿ ಕೆಲಸ ನಿರ್ವಹಿಸುವ ಗುತ್ತಿಗೆ ಕೆಲಸಗಾರರಿಗೆ ಮಾತ್ರ ಶಿವಮೊಗ್ಗ ಹಾಲು ಒಕ್ಕೂಟದ ಉಪಹಾರ ಗೃಹದಿಂದ ಡೈರಿಯು ನಿಗಧಿಪಡಿಸುವ ದರದಲ್ಲಿ ಊಟ, ಕಾಫಿ, ತಿಂಡಿ ಒದಗಿಸಲಾಗುವುದು.

8.0 ಗುತ್ತಿಗೆದಾರರು ಒದಗಿಸುವ ಕೆಲಸಗಾರರು ಇತರೇ ಯಾವುದೇ ತರದ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರಬಾರದು. ಡೈರಿ ಆವರಣದ ಒಳಗೆ ಮತ್ತು ಹೊರಗೆ ಗುತ್ತಿಗೆ ಕೆಲಸಗಾರರ ಕೃತ್ಯಗಳಿಗೆ ಗುತ್ತಿಗೆದಾರರೇ ಹೊಣೆಗಾರರು. ಅದರಿಂದ ಡೈರಿಗೆ ನಷ್ಟವಾದಲ್ಲಿ ಗುತ್ತಿಗೆದಾರರೇ ಭರಿಸಬೇಕಾಗುತ್ತದೆ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ರೀತಿಯಲ್ಲಿ ಡೈರಿಯ ಹಿತಾಸಕ್ತಿಗೆ ಧಕ್ಕೆಯಾಗದಂತೆ ಗುತ್ತಿಗೆದಾರರು ಕಾರ್ಯನಿರ್ವಹಿಸಬೇಕು.

9.0 ಗುತ್ತಿಗೆದಾರರು ಡೈರಿಯ ಆಸ್ತಿಯನ್ನು ಜಾಗರೂಕತೆಯಿಂದ ರಕ್ಷಿಸಿ ಕಾಪಾಡಬೇಕು ಮತ್ತು ಯಾವುದೇ ಹಾನಿಕಾರಕ ಘಟನೆ ಸಂಭವಿಸದಂತೆ ಜಾಗ್ರತೆ ವಹಿಸಬೇಕು. ಗುತ್ತಿಗೆದಾರರು ಒದಗಿಸುವ ಕೆಲಸಗಾರರ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿಯಿಂದ ಅಥವಾ ಉದ್ದೇಶಪೂರ್ವಕವಾಗಿ ಡೈರಿಗೆ ನಷ್ಟ ಉಂಟಾದಲ್ಲಿ, ಕಳವು ಆದಲ್ಲಿ, ವಸ್ತುಗಳು ನಾಶವಾದಲ್ಲಿ ಅವುಗಳ ಪೂರ್ಣ ಮೊತ್ತವನ್ನು ಡೈರಿಗೆ ಭರಿಸಲು ಗುತ್ತಿಗೆದಾರರೇ ಬದ್ಧರಿರಬೇಕು ಹಾಗೂ ಹೀಗೆ ಆಗುವ ನಷ್ಟವನ್ನು ದಂಡದೊಂದಿಗೆ ಮಾಹೆಯಾನ ಬಿಲ್ಲು/ಭದ್ರತಾ ಠೇವಣಿಯಲ್ಲಿ ಕಟಾಯಿಸಲಾಗುವುದು. ಗುತ್ತಿಗೆದಾರರು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಕಾಲಕಾಲಕ್ಕೆ ನೀಡುವ ಬೇಡಿಕೆ/ಸೂಚನೆಗೆ ಅನುಗುಣವಾಗಿ ಹಾಗೂ ಕ್ಲಪ್ತ ಸಮಯದಲ್ಲೂ ಸಮರ್ಪಕವಾಗಿ ಮತ್ತು ವಿಳಂಬವಾಗದಂತೆ ಸಕಾಲದಲ್ಲಿ ಕಾರ್ಯನಿರ್ವಹಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಉಂಟಾಗಬಹುದಾದ ನಷ್ಟದ ಮೊತ್ತವನ್ನು ಸೂಕ್ತ ದಂಡದೊಂದಿಗೆ ಗುತ್ತಿಗೆದಾರರಿಂದ ವಸೂಲಿ ಮಾಡಲಾಗುವುದು.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ
ಮತ್ತು ಮೊಹರು

ಗುತ್ತಿಗೆ ಪಡೆಯುವ ಟೆಂಡರುದಾರರು ಡೈರಿಯ ಬೇಡಿಕೆಗೆ/ಸೂಚನೆಗನುಗುಣವಾಗಿ ಐ.ಟಿ.ಐ/ಡಿಪ್ಲೋಮ ವಿದ್ಯಾರ್ಹತೆ / ತ'ರಬೇತಿ ಹೊಂದಿದ ಅಪರೇಟರ್‌ಗಳನ್ನು ನಿಯೋಜಿಸತಕ್ಕದ್ದು ಹಾಗೂ ಉತ್ತಮ ಗುಣಮಟ್ಟದ ಬಿಡಿ ಭಾಗಗಳನ್ನು ಯಂತ್ರಗಳಿಗೆ ಬಳಸತಕ್ಕದ್ದು. ಕಡಿಮೆ ಗುಣಮಟ್ಟದ ಅಥವಾ ಸಕಾಲದಲ್ಲಿ ಯಂತ್ರಗಳ ಚಾಲನೆ ಮತ್ತು ನಿರ್ವಹಣೆಯಾಗದೆ ಹೋದ ಸಂದರ್ಭದಲ್ಲಿ ಹಾಗೂ ಸಕಾಲದಲ್ಲಿ ಬೇಡಿಕೆ ಅನುಸಾರ ಹಾಲು ಮತ್ತು ಹಾಲಿನ ಉತ್ಪನ್ನಗಳು ಪೂರೈಕೆ ಮಾಡಲಾಗದೆ ಹೋದ ಸಂದರ್ಭದಲ್ಲಿ ನಷ್ಟದ ಮೊತ್ತವನ್ನು ದಂಡದೊಂದಿಗೆ ಕಟಾಯಿಸಲಾಗುವುದು.

10.0 ಗುತ್ತಿಗೆದಾರರು ತಮಗೆ ವಹಿಸಿದ ಕೆಲಸಕಾರ್ಯಗಳನ್ನು ನಿರ್ವಹಿಸಲು ಪಡೆಯುವ ಕೆಲಸಗಾರರು ಗುತ್ತಿಗೆದಾರರ ನೌಕರರಾಗಿದ್ದು, ಯಾವಾಗಲೂ ಗುತ್ತಿಗೆದಾರರ ನೇರ ಅನನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರುತ್ತಾರೆ. ಗುತ್ತಿಗೆದಾರರು ಗುತ್ತಿಗೆಯಡಿ ತಮಗಿರುವ ಬಾಧ್ಯತೆಗಳನ್ನು ಪೂರೈಸಲು ಕೆಲಸಗಾರರ ರಜಾ ಅವಧಿಯ ಬದಲಿ ವ್ಯವಸ್ಥೆಗೆ ಒಳಗೊಂಡು ಯಾವಾಗಲೂ ಅವಶ್ಯವಿರುವಷ್ಟು ಕನಿಷ್ಟ ಕೆಲಸಗಾರರನ್ನು ಕೆಲಸಕ್ಕೆ ನಿಯೋಜಿಸುವುದು ಮತ್ತು ಸದರಿ ಕೆಲಸಗಾರರು ಗುತ್ತಿಗೆದಾರರ ಬಾಧ್ಯತೆಗಳನ್ನು ಪೂರೈಸುವಂತೆ ಖಾತರಿಪಡಿಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.

10.1 ಯಾವುದೇ ಕಾರಣಕ್ಕೆ ಗುತ್ತಿಗೆ ಕೆಲಸಗಾರರು ಡೈರಿಯ ನೌಕರರಲ್ಲ. ಆದ್ದರಿಂದ ಗುತ್ತಿಗೆ ಕೆಲಸಗಾರರ ತಪ್ಪು, ಒಪ್ಪುಗಳಿಗೆ ಗುತ್ತಿಗೆದಾರರು/ಗುತ್ತಿಗೆ ಕೆಲಸಗಾರರು ಇವರುಗಳ ಮಧ್ಯೆ ಯಾವುದೇ ರೀತಿಯಲ್ಲಿ ಏನೇ ಆದರೂ ಮಾಲೀಕ – ನೌಕರ ಸಂಬಂಧವಿರುವುದಿಲ್ಲ ಮತ್ತು ಗುತ್ತಿಗೆದಾರರು ಸ್ವತಂತ್ರ ಏಜೆನ್ಸಿಯಾಗಿ ತಮ್ಮ ವ್ಯವಹಾರವನ್ನು ನಿರ್ವಹಿಸಬೇಕಾಗಿದ್ದು ಈ ವಾಸ್ತವಂಶವನ್ನು ತಾವು ಕೆಲಸಕ್ಕೆ ನಿಯೋಜಿಸುವ ಎಲ್ಲರಿಗೂ ಸ್ಪಷ್ಟಪಡಿಸಬೇಕಾಗುತ್ತದೆ.

11.0 ಗುತ್ತಿಗೆ ಅವಧಿಯು ಗುತ್ತಿಗೆ ಮಂಜೂರಾದ ದಿನಾಂಕ'ದಿಂದ ಒಂದು ವರ್ಷಗಳಾಗಿದ್ದು ಈ ಅವಧಿಯಲ್ಲಿ ಗುತ್ತಿಗೆದಾರರ ಕೆಲಸಕಾರ್ಯಗಳು ತೃಪ್ತಿಕರ / ಸಮರ್ಪಕವಾಗಿಲ್ಲದಿದ್ದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಮೂರು ದಿನಗಳ ಲಿಖಿತ ಕಾರಣ – ಕೇಳಿ – ನೋಟೀಸ್ ನೀಡಿ ಅದಕ್ಕೆ ಗುತ್ತಿಗೆದಾರರು ನೀಡುವ ವಿವರಣೆ : ಸಮಜಾಯಿಷಿ ಡೈರಿಗೆ ತೃಪ್ತಿಕರವಾಗಿ ಕಂಡುಬಾರದಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವ ಹಾಗು (ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಿಸಿ) ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಶಿವಮೊಗ್ಗ ಹಾಲು ಒಕ್ಕೂಟವು ಕಾದಿರಿಸಿಕೊಂಡಿದೆ.

11.1 ಡೈರಿಯ ಆವರಣದಲ್ಲಿ ಡೈರಿಯು ವಹಿಸಿರುವ ಗುತ್ತಿಗೆ ಕೆಲಸವನ್ನು ಮಾತ್ರ ನಿರ್ವಹಿಸಲು ಗುತ್ತಿಗೆದಾರರು ಮತ್ತು ಅವರ ಕೆಲಸಗಾರರಿಗೆ ಅವಕಾಶ ನೀಡಲಾಗಿದ್ದರೂ ಡೈರಿಯ ಆವರಣದ ಮೇಲೆ ಗುತ್ತಿಗೆದಾರರಿಗೆ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಧಾರಣಾಧಿಕಾರ ಇರುವುದಿಲ್ಲ. ಗುತ್ತಿಗೆದಾರರು ಮತ್ತು ಅವರ ಕೆಲಸಗಾರರು ಡೈರಿಯ ವಿವೇಚನೆಯ ಮೇರೆಗೆ ಡೈರಿಯ ಆವರಣವನ್ನು ತೆರವುಗೊಳಿಸಿ ಹೊರಹೋಗಬೇಕು. ಗುತ್ತಿಗೆದಾರರು ಅಥವಾ ಗುತ್ತಿಗೆದಾರರ ಕೆಲಸಗಾರರಿಂದ ಡೈರಿಯ ಕೆಲಸಕಾರ್ಯಗಳಿಗೆ ತೊಂದರೆ ಉಂಟು ಮಾಡುವ ಬೆದರಿಕೆಯಿಂದಾಗಿ ಕೈಗಾರಿಕಾ ಸಂಬಂಧ ಸಮಸ್ಯೆ ಉದ್ಭವಿಸಿದಲ್ಲಿ ಗುತ್ತಿಗೆಯನ್ನು 24 ಘಂಟೆಯೊಳಗೆ ರದ್ದುಪಡಿಸಲಾಗುವುದು ಮತ್ತು ಗುತ್ತಿಗೆದಾರರು ಆ ಅವಧಿಯೊಳಗೆ ಕೆಲಸಕಾರ್ಯಗಳನ್ನುನಿರ್ವಹಿಸಲು ಹೊಸ ಗುತ್ತಿಗೆದಾರರಿಗೆ/ವ್ಯವಸ್ಥೆಗೆ ಅವಕಾಶವಾಗುವಂತೆ ಡೈರಿಯ ಆವರಣವನ್ನು ತೆರವುಗೊಳಿಸಬೇಕು.

12.0 ಗುತ್ತಿಗೆಯ ಅವಧಿಯಲ್ಲಿ ಗುತ್ತಿಗೆಯನ್ನು ರದ್ದುಗೊಳಿಸುವುದು ಅವಶ್ಯವೆಂದು ಕಂಡು ಬಂದಲ್ಲಿ ಯಾವುದೇ ಕಾರಣವನ್ನು ನಮೂದಿಸದೆ ಲಿಖಿತ ನೋಟೀಸನ್ನು ನೀಡಿ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು ಶಿವಮೊಗ್ಗ ಹಾಲು ಒಕ್ಕೂಟವು ಕಾದಿರಿಸಿಕೊಂಡಿದೆ.

13.0 ಗುತ್ತಿಗೆದಾರರು ಡೈರಿಯಿಂದ ನೀಡಲಾಗುವ ಗುತ್ತಿಗೆಯನ್ನು ಭಾಗಶಃ/ಪೂರ್ಣವಾಗಿ ಬೇರೆಯವರಿಗೆ ಒಳ ಗುತ್ತಿಗೆಗೆ/ ಒಳಬಾಡಿಗೆಗೆ ನೀಡಬಾರದು ಅಂದರೆ ಉಪಗುತ್ತಿಗೆ ನೀಡಿಕೆಗೆ ಟೆಂಡರಿನಲ್ಲಿ ಅವಕಾಶವಿರುವುದಿಲ್ಲ.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ

ಮತ್ತು ಮೊಹರು

14.0 ಗುತ್ತಿಗೆ ಕೆಲಸಗಾರರಿಗೆ ವಿವಿಧ ಕಾನೂನುಗಳಲ್ಲಿ ನಿಗದಿಪಡಿಸಿದ ಸೌಲಭ್ಯ ಮತ್ತು ಸವಲತ್ತುಗಳನ್ನು ನೀಡುವುದು ಗುತ್ತಿಗೆದಾರರ ಶಾಸನಬದ್ಧ ಹೊಣೆಗಾರಿಕೆಯಾಗಿದ್ದರೂ ಅವುಗಳಿಗಿಂತ ಹೆಚ್ಚಿನ ಸೌಲಭ್ಯಗಳನ್ನು ನೀಡುವುದಾದಲ್ಲಿ ಸದರಿ ವೆಚ್ಚವನ್ನು ಗುತ್ತಿಗೆದಾರರೇ ಸ್ವತಃ ಭರಿಸಬೇಕು. ಆದಾಗ್ಯೂ ಎಲ್ಲೆಲ್ಲಿ ಅನ್ವಯಿಸುವುದೋ ಅಂತಹ ಸ್ಥಳಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡುವ ದೃಷ್ಟಿಯಿಂದ ಮತ್ತು ಸುರಕ್ಷಾ ಕ್ರಮಗಳ ಅನುಷ್ಠಾನಗೊಳಿಸುವಲ್ಲಿ ಡೈರಿಯು ನೀಡುವ ಸಲಹೆ ಸೂಚನೆಗಳಂತೆ ವಸ್ತು ನೀತಿಯನ್ನು ಕಡ್ಡಾಯವಾಗಿ ಪಾಲಿಸಲು ಗುತ್ತಿಗೆದಾರರು ಜವಾಬ್ದಾರರಾಗಿರುತ್ತಾರೆ.

15.0 ಗುತ್ತಿಗೆದಾರರು ಒದಗಿಸುವ ಎಲ್ಲಾ ಕೆಲಸಗಾರರನ್ನು ಕಾನೂನಿನ್ವಯ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಅವರುಗಳ ಆರೋಗ್ಯ ದೃಢೀಕರಣ ಪತ್ರವನ್ನು ಪಡೆದಿರಬೇಕು. ಮಾತ್ರವಲ್ಲದೆ ಕೆಲಸಗಾರರು ತಮ್ಮ ದೈಹಿಕ/ವಸ್ತ್ರಗಳ ಸ್ವಚ್ಛತೆಯನ್ನು ಕಾಪಾಡಿ ಮುಖ ಕ್ಷೌರ ಮಾಡಿಸಿರಬೇಕು/ತಲೆಗೂದಲು/ಉಗುರು ಕತ್ತರಿಸಿರಬೇಕು. ಕೆಲಸಗಾರರು ಎಲೆ ಅಡಿಕೆ/ಬೀಡ/ತಂಬಾಕು/ಗುಟ್ಕಾ ಮುಂತಾದ ಜಗಿಯುವ ಪದಾರ್ಥಗಳನ್ನು ಹಾಗೂ ನಶ್ಯ ಸೇವನೆ, ಧೂಮಪಾನ, ಮಧ್ಯಪಾನ ಮಾಡಿ ಕೆಲಸಕ್ಕೆ ಬರಬಾರದು ಮತ್ತು ಇವುಗಳನ್ನು ಕೆಲಸದ ಅವಧಿಯಲ್ಲಿ ಮಾಡಬಾರದು.

16.0 ಕಾಲಕಾಲಕ್ಕೆ ಆಗುವ ತಿದ್ದುಪಡಿಗಳೊಂದಿಗೆ ಜಾರಿಯಲ್ಲಿರುವ ವೇತನ ಪಾವತಿ ಕಾಯಿದೆ, 1936, ಕನಿಷ್ಟ ವೇತನ ಕಾಯಿದೆ, 1948, ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ರದ್ದತಿ) ಕಾಯಿದೆ, 1970, ನೌಕರರ ರಾಜ್ಯ ವಿಮಾ ಕಾಯಿದೆ, 1948, ಕೆಲಸಗಾರರ ಪರಿಹಾರ ಕಾಯಿದೆ, 1923 ನೌಕರರ ಭವಿಷ್ಯ ನಿಧಿ ಮತ್ತು ಸಂಕೀರ್ಣ ಉಪಬಂಧಗಳ ಕಾಯಿದೆ, 1952, ಬೋನಸ್ ಪಾವತಿ ಕಾಯಿದೆ, 1965 ಕಾರ್ಖಾನೆ ಕಾಯಿದೆ, 1948 ಉಪಧನ ಕಾಯಿದೆ, 1972 ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯಿದೆ, 1965 ಕರ್ನಾಟಕ ಕೈಗಾರಿಕೆ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳಯ) ನಿಯಮಗಳು, 1963, ಆದಾಯ/ ವೃತ್ತಿ, ಸೇವಾ ತೆರಿಗೆ ಕಾಯಿದೆ ಮುಂತಾದ ಕೆಲಸಗಾರರ ನಿಯೋಜನೆ ಹಾಗೂ ಗುತ್ತಿಗೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಅನ್ವಯಿಸುವ ಕಾಲಕಾಲಕ್ಕೆ ಆಗುವ ತಿದ್ದುಪಡಿಗಳೊಂದಿಗೆ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯಗಳ ವಿವಿಧ ಕಾನೂನುಗಳು (Statutes), ಅಧಿನಿಯಮಗಳು (Rules), ನಿಯಮಗಳು (Acts), ವಿನಿಮಯಗಳು (Regulations) ಮತ್ತು ಆದೇಶಗಳು ಇವುಗಳನ್ನು ಪಾಲಿಸಲು ಗುತ್ತಿಗೆದಾರರು ಬದ್ಧರಾಗಿರಬೇಕು.

16.1 ಗುತ್ತಿಗೆದಾರರು ಕಾಲಕಾಲಕ್ಕೆ ಜಾರಿಯಲ್ಲಿರುವ ಸರ್ವಿಸ್ ಟ್ಯಾಕ್ಸ್‌ನ್ನು ಸಂಬಂಧಿಸಿದ ಇಲಾಖೆಗೆ ಪಾವತಿಮಾಡಬೇಕು. ಪಾವತಿಸಿದ ಬಗ್ಗೆ ಸೂಕ್ತ ದಾಖಲೆಗಳನ್ನು ಒಕ್ಕೂಟಕ್ಕೆ ಒದಗಿಸದತಕ್ಕದ್ದು.

ಸೇವಾತೆರಿಗೆ0ಯು ವಾರ್ಷಿಕ/ ಅರ್ಧವಾರ್ಷಿಕ ಸರ್ವಿಸ್ ಟ್ಯಾಕ್ಸ್ ರಿಟರ್ನ್‌ಗಳನ್ನು ಫೈಲ್ ಮಾಡಿದ ದಾಖಲಾತಿಗಳನ್ನು ಒಕ್ಕೂಟದ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ
ಮತ್ತು ಮೊಹರು

17.0 ಒಕ್ಕೂಟದ ಅಗತ್ಯತೆಗೆ ಅನುಗುಣವಾಗಿ ಐ.ಟಿ.ಐ. ಎಲೆಕ್ಟ್ರಿಕಲ್ / ಎಲೆಕ್ಟ್ರಾನಿಕ್ಸ್ ಅಥವಾ ಜೆ.ಒ.ಸಿ ವಿದ್ಯಾರ್ಹತೆಯೊಂದಿಗೆ ತರಬೇತಿ ಹೊಂದಿದ ಆಪರೇಟರ್‌ಗಳನ್ನು ಶಿವಮೊಗ್ಗ ಡೈರಿ ಮತ್ತು ದಾವಣಗೆರೆ ಡೈರಿ0ಯಲ್ಲಿ ಹಾಲು ಪ್ಯಾಕಿಂಗ್ ವಿಭಾಗಕ್ಕೆ ಒದಗಿಸ ಬೇಕಾದ ಕನಿಷ್ಟ ಆಪರೇಟಗಳ ಸಂಖ್ಯೆ ವಿವರ ಈ ಕಳಕಂಡಂತೆ ಇದೆ.

ಅ) **<u>ಶಿವಮೊಗ್ಗ ಡೈರಿ</u>** ( 19 ಆಪರೇಟರ್ ) **<u>ಆಪರೇಟರ್ಸ್</u>**

1. ಹಾಲು ಪ್ಯಾಕಿಂಗ್ – 5 ಸಂಖ್ಯೆ ಆಪರೇಟರ್ x 2 shift = 10 ಸಂಖ್ಯೆ ಆಪರೇಟರ್‌ಗಳು
2. ಕೋಂಡಿಂಗ್ – 1 ಸಂಖ್ಯೆ ಆಪರೇಟರ್ x 2 shift = 2 ಸಂಖ್ಯೆ ಆಪರೇಟರ್‌ಗಳು
3. ಮೊಸರು ಮತ್ತು ಮಜ್ಜಿಗೆ ಪ್ಯಾಕಿಂಗ್ – 1 ಸಂಖ್ಯೆ ಆಪರೇಟರ್ x 2 shift = 2 ಸಂಖ್ಯೆ ಆಪರೇಟರ್‌ಗಳು
4. ತುಪ್ಪ ಪ್ಯಾಕಿಂಗ್ 1 ಸಂಖ್ಯೆ ಆಪರೇಟರ್ x 2 shift = 2 ಸಂಖ್ಯೆ ಆಪರೇಟರ್
5. ಕೋಡಿಂಗ್ 1 ಸಂಖ್ಯೆ ಆಪರೇಟರ್ = 1ಸಂಖ್ಯೆ ಆಪರೇಟರ್
6. ರಾತ್ರಿ ಪಾಳಿ 1 ಸಂಖ್ಯೆ ಆಪರೇಟರ್ = 1ಸಂಖ್ಯೆ ಆಪರೇಟರ್
7. ಮೇಲ್ವಿಚಾರಕರು 1 ಸಂಖ್ಯೆ ಆಪರೇಟರ್ = 1ಸಂಖ್ಯೆ ಆಪರೇಟರ್

**ಆ) <u>ದಾವಣಗೆರೆ ಡೈರಿ ( 06 ಆಪರೇಟರ್)</u>**

**1.** ಹಾಲು, ಮೊಸರು ಮತ್ತು ಮಜ್ಜಿಗೆ ಪ್ಯಾಕಿಂಗ್ = 5 ಸಂಖ್ಯೆ ಆಪರೇಟರ್‌ಗಳು
**2.** ಕೋಡಿಂಗ್ ಯಂತ್ರ ಚಾಲನೆ = 1 ಸಂಖ್ಯೆ ಆಪರೇಟರ್‌ಗಳು

17.1 ಗುತ್ತಿಗೆಯನ್ನು ಪಡೆದ ತಕ್ಷಣ ಆಪರೇಟರ್‌ಗಳ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಸರ್ಟಿಫಿಕೇಟ್‌ಗಳನ್ನು ನೀಡುವುದು.

17.2 ಗುರುತಿನ ಚೀಟಿ ಕಡ್ಡಾಯವಾಗಿ ನೀಡುವುದು.

17.3 ಆಪರೇಟರ್‌ಗಳಿಗೆ ಸಮವಸ್ತ್ರವನ್ನು ಡ್ರಸ್ ಕೋಡ್ ಅನ್ವಯ ಕಡ್ಡಾಯವಾಗಿ ನೀಡುವುದು.

17.4 ಶಿವಮೊಗ್ಗ ಡೈರಿಯಲ್ಲ ಮೊಸರು ಮತ್ತು ಮಜ್ಜಿಗೆ ಪ್ಯಾಕಿಂಗ್ ಒಂದೇ ಪಾಳಿಯಲ್ಲಿ ಪೂರ್ಣಗೊಂಡ ಸಂದರ್ಭದಲ್ಲಿ ಸದರಿ ಆಪರೇಟರ್ ಹಾಲು ಪ್ಯಾಕಿಂಗ್ ವಿಭಾಗದಲ್ಲಿ ಕೆಲಸ ನಿರ್ವಹಿಸತಕ್ಕದ್ದು.

18.0 ಹಿಂದಿನ ನಡತೆ ಸರಿಯಿಲ್ಲದ ಕೆಲಸಗಾರರನ್ನು ಗುತ್ತಿಗೆದಾರರು ಡೈರಿಯ ಕೆಲಸಕ್ಕೆ ನಿಯೋಜಿಸಬಾರದು, ಗುತ್ತಿಗೆದಾರರು ಒದಗಿಸುವ ಕೆಲಸಗಾರರು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಅಥವಾ ನಡತೆ/ಕೆಲಸ ತೃಪ್ತಿಕರವಿಲ್ಲವೆಂದು ಡೈರಿಯು ತಿಳಿಸಿದಲ್ಲಿ ಅಂತಹವರನ್ನು ಕೂಡಲೇ ಬದಲಾಯಿಸುವುದು. ಕೆಲಸಗಾರರು ಶಿಸ್ತಿನಿಂದ ಕಾರ್ಯನಿರ್ವಹಿಸುವಂತೆ ಸೂಕ್ತ ಕ್ರ'ಮ ಕೈಗೊಳ್ಳಲು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.

19.0 ಗುತ್ತಿಗೆದಾರರು ಡೈರಿಯಿಂದ ಕೆಲಸಗಾರರ ಗುರುತಿನ ಸಂಖ್ಯೆ (ಖಅ) ಯನ್ನು ಪಡೆದು ತಮ್ಮ ಕೆಲಸಗಾರರ ಭಾವಚಿತ್ರವನ್ನು ಒಳಗೊಂಡ ಗುರುತಿನ ಚೀಟಿಯನ್ನು ಮತ್ತು ಪ್ರತಿ ತಿಂಗಳು ವೇತನ' ಪಟ್ಟಿಯನ್ನು ನೀಡಬೇಕು. ಗುತ್ತಿಗೆದಾರರು ಕೆಲಸಗಾರರ ಹಾಜರಾತಿ ಪುಸ್ತಕ, ವೇತನ ಬಟವಾಡೆ ಪುಸ್ತಕ ಹಾಗೂ ಭಾವಚಿತ್ರದೊಂದಿಗೆ ವಿಳಾಸದ ವಿವರವನ್ನು, ಭವಿಷ್ಯ ನಿಧಿ, ರಾಜ್ಯ ನೌಕರರ ವಿಮಾ ವಂತಿಗೆ ದಾಖಲಾತಿಗಳನು ಕಾನೂನಿನಂತೆ ಇಟ್ಟುಕೊಂಡು ಅಗತ್ಯ ಬಿದ್ದಲ್ಲಿ ಶಾಸನಬದ್ಧ ಪ್ರಾಧಿಕಾರ/ ಒಕ್ಕೂಟದ ಪರಿಶೀಲನೆಗೆ ಸಲ್ಲಿಸಲು ಬದ್ಧರಾಗಿರಬೇಕು.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ

ಟೆಂಡರುದಾರರ ಸಹಿ
ಮತ್ತು ಮೊಹರು

20.0 ಗುತ್ತಿಗೆದಾರರು ಕೆಲಸಗಾರರಿಗೆ ಪಾವತಿಸುವ ವೇತನದಲ್ಲಿ ಭವಿಷ್ಯನಿಧಿ ಮತ್ತು ನೌಕರರ ರಾಜ್ಯ ವಿಮೆ ವಂತಿಗೆಯನ್ನು ಕಟಾಯಿಸಿ, ಸಂಬಂಧಪಟ್ಟ ಇಲಾಖೆಗೆ ಮಾಲೀಕರ ವಂತಿಗೆಯೊಂದಿಗೆ ಪಾವತಿಸಲು ಬದ್ದರಿರುತ್ತಾರೆ. ಸದರಿ ವಂತಿಗೆ ಪಾವತಿಯಲ್ಲಿ ಸುಸ್ತಿದಾರರಾದಲ್ಲಿ ಅಥವಾ ವ್ಯತ್ಯಾಸವಾದಲ್ಲಿ ದಂಡ ಒಳಗೊಂಡು ತತ್ಪರಿಣಾಮ ಉದ್ಭವಿಸುವ ಪರಿಣಾಮಗಳಿಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ. ಡೈರಿಯು ಯಾವುದೇ ರೀತಿಯಲ್ಲಿ ಇದಕ್ಕೆ ಜವಾಬ್ದಾರವಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಭವಿಷ್ಯ ನಿಧಿ ಮತ್ತು ನೌಕರರ ರಾಜ್ಯ ವಿಮಾ ದೇಣಿಗೆಯನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸಿ ಸಂಬಂಧಿಸಿದವರಿಗೆ ಪಾವತಿಸಲು ಡೈರಿಯು ಅಧಿಕಾರ ಹೊಂದಿರುತ್ತದೆ. ಗುತ್ತಿಗೆದಾರರು ನಿಯೋಜಿಸುವ ಪ್ರತಿ ಒಬ್ಬ ಕೆಲಸಗಾರರಿಗೆ ಸಂಬಂಧಿಸಿದಂತೆ ಹಿಂದಿನ ತಿಂಗಳ ಭವಿಷ್ಯನಿಧಿ ಮತ್ತು ನೌಕರರ ರಾಜ್ಯ ವಿಮೆ ವಂತಿಗೆಯನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸಿರುವ ಬಗ್ಗೆ ದಾಖಲಾತಿಗಳನ್ನು(Challan) ಪ್ರತಿ ತಿಂಗಳ ಬಿಲ್ಲಿನೊಂದಿಗೆ ಕಡ್ಡಾಯವಾಗಿ ಲಗತ್ತಿಸಿರಬೇಕು ಮತ್ತು ವೇತನದ ಪುಸ್ತಕವನ್ನು ಪರಿಶೀಲನೆಗೆ ಹಾಜರುಪಡಿಸಬೇಕು. ಇಲ್ಲದಿದ್ದಲ್ಲಿ ಹಣ ಪಾವತಿಸಲಾಗುವುದಿಲ್ಲ.

21.0 ಡೈರಿಯು ವಹಿಸುವ ಕೆಲಸವನ್ನು ಸಂಬಂಧಿಸಿದ ಅಧಿಕರಿಗಳ ಸೂಚನೆಯಂತೆ ನಿರ್ವಹಿಸುವುದು. ಗುತ್ತಿಗೆ ಕೆಲಸಗಾರರು ಕೆಲಸವಿರುವಾಗ ಮಾತ್ರ ಡೈರಿಯ ಆವರಣವನ್ನು ಪ್ರವೇಶಿಸುವುದು ಮತ್ತು ಕೆಲಸ ಇಲ್ಲದ ಅವಧಿಯಲ್ಲಿ ಡೈರಿ ಆವರಣದಲ್ಲಿ ಇರಬಾರದು. ಡೈರಿಯ ಆವರಣದ ಒಳಗೆ ಬರುವಾಗ ಮತ್ತು ಹೊರಗೆ ಹೋಗುವಾಗ ಭದ್ರತಾ ವಿಭಾಗ'/ಅಧಿಕಾರಿಗಳ ತಪಾಸಣೆಗೆ ಒಳಪಡಬೇಕು.

22.0 ಡೈರಿಯ ಗುತ್ತಿಗೆದಾರರಿಗೆ ವಹಿಸಿದ ತುಂಡು ಗುತ್ತಿಗೆಯನ್ನು ಡೈರಿಯ ಸೂಚನೆಗಳಂತೆ ನಿರ್ವಹಿಸಲು ಗುತ್ತಿಗೆದಾರರು ನಿಯುಕ್ತಿಗೊಳಿಸುವ ಕೆಲಸಗಾರರ ಒಟ್ಟು ಸಂಖ್ಯೆ ಬಗ್ಗೆ ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ರದ್ಧತಿ) ಕಾಯಿದೆಯಲ್ಲಿ ನಮೂದಿಸಿರುವ ರೀತ್ಯಾ ನಮೂನೆ VI ರಲ್ಲಿ ಗುತ್ತಿಗೆ ಕಾರ್ಮಿಕ ಪರವಾನಗಿಯನ್ನು ಗುತ್ತಿಗೆ ಪಡೆದ 15 ದಿನಗಳೊಳಗೆ ಸಕ್ಷಮ ಪ್ರಾಧಿಕಾರದಿಂದ ಪಡೆದು ಡೈರಿಗೆ ಸಲ್ಲಿಸಬೇಕು. ನಿಯೋಜಿಸುವ ಕೆಲಸಗಾರರ ಸಂಖ್ಯೆಯಲ್ಲಿ ಮಾರ್ಪಾಡು ಆದಲ್ಲಿ ಗುತ್ತಿಗೆ ಕಾರ್ಮಿಕ ಪರವಾನಗಿಯಲ್ಲಿ ಸೂಕ್ತ ತಿದ್ದುಪಡಿ ಮಾಡಿ ಡೈರಿಗೆ ಸಲ್ಲಿಸಬೇಕು.

23.0 ಗುತ್ತಿಗೆ ಪಡೆದ ಟೆಂಡರುದಾರರು ತಾವು ವಹಿಸಿಕೊಳ್ಳುವ ಜವಾಬ್ದಾರಿ ಮತ್ತು ಬಾಧ್ಯತೆಗಳನ್ನು ಶಿವಮೊಗ್ಗ ಹಾಲು ಒಕ್ಕೂಟದ ಅವಶ್ಯಕತೆಗನುಗುಣವಾಗಿ ವಾರದ ರಜೆ ಮತ್ತು ಸಾರ್ವತ್ರಿಕ ರಜಾ ದಿನ ಒಳಗೊಂಡು ಎಲ್ಲಾ ದಿನಗಳಲ್ಲೂ ವಿವಿಧ ಪಾಳಿಗಳಲ್ಲಿ ತೃಪ್ತಿಕರವಾಗಿ ನಿರ್ವಹಿಸಲು ಅಗತ್ಯವಿರುವ 18 ವರ್ಷ ಪೂರ್ಣಗೊಂಡಿರುವ ದೈಹಿಕವಾಗಿ ಸಮರ್ಥರಾದ 20 ರಿಂದ 50ರ ವಯೋಮಾನದ ಆರೋಗ್ಯವಂತ ನುರಿತ ಕೆಲಸಗಾರರನ್ನು ನಿಯುಕ್ತಿಗೊಳಿಸತಕ್ಕದ್ದು. ಎಲ್ಲಾ ಪಾಳಿಗಳಲ್ಲಿ ಕೆಲಸವನ್ನು ಉಸ್ತುವಾರಿ ಮಾಡಲು ಮತ್ತು ಪಾಳಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕೆಲಸಗಾರರನ್ನು ನಿಯಂತ್ರಿಸಲು ಅರ್ಹ ಸಮರ್ಥ ಮತ್ತು ನುರಿತ ಡಿಪ್ಲೊಮ ವಿಧ್ಯಾರ್ಹತೆ (ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ಸ್) ಹೊಂದಿರುವ ಮೇಲ್ವಿಚಾರಕರನ್ನು ಹೊಂದಿದ್ದು ಪ್ರತಿ ಪಾಳಿಯಲ್ಲಿ ಅವಶ್ಯಕತೆಗನುಗುಣವಾಗಿ ಅಗತ್ಯವಿರುವ ಕೆಲಸಗಳನ್ನು ನಿಯೋಜಿಸುವ ಬಗ್ಗೆ ನಿಗಾ ಇಡಬೇಕು. ಶಾಸನಬದ್ಧ ಕಟಾವಣೆಗಳ ಪಾವತಿಯ ಬಗ್ಗೆ ಜವಾಬ್ದಾರರಾಗಿ ಬದಲಾಗಬಹುದು. ಅನಿವಾರ್ಯ ಸಂದರ್ಭಗಳಲ್ಲಿ ಪಾಳಿಯ ನಂತರವೂ ಕೆಲಸ ನಿರ್ವಹಿಸಬೇಕಾಗುತ್ತದೆ. ಹೆಚ್ಚುವರಿ ಅವಧಿ ಮತ್ತು ರಜಾ ದಿನಗಳಲ್ಲಿ ಕೆಲಸ ನಿರ್ವಹಿಸಿದ ಬಗ್ಗೆ ಗುತ್ತಿಗೆದಾರರಿಗೆ ಶಿವಮೊಗ್ಗ ಹಾಲು ಒಕ್ಕೂಟದಿಂದ ಯಾವುದೇ ಹೆಚ್ಚುವರಿ ಹಣ ಪಾವತಿಸಲಾಗುವುದಿಲ್ಲ. ಆದ್ದರಿಂದ ಟೆಂಡರುದಾರರು ವಾಣಿಜ್ಯ ದರ ಅನುಸೂಚಿಯಲ್ಲಿ ದರವನ್ನು ನಮೂದಿಸುವಾಗ ಇದನ್ನೂ ಪರಿಗಣಿಸಬೇಕು.

